ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ವಿಜ್ಞಾನ

2026–2027

# ವಿದ್ಯಾರ್ಥಿ ಅಭ್ಯಾಸ ಪುಸ್ತಕ

NOT TO BE REPUBLISHED @KTBS

10

ಹತ್ತನೇ ತರಗತಿ

ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ ಮತ್ತು ಮಾರ್ಗದರ್ಶನ

| | | |
|---|---|---|
| ಶ್ರೀಮತಿ ವಿ. ರಶ್ಮಿ ಮಹೇಶ್,ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ<br>ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು<br>ಸಾಕ್ಷರತೆ ಇಲಾಖೆ, ಕರ್ನಾಟಕ ಸರ್ಕಾರ | ಶ್ರೀ ವಿಕಾಸ್ ಕಿಶೋರ್ ಸುರಳ್ಕರ್,ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ<br>ಕರ್ನಾಟಕ ಸರ್ಕಾರ | ಶ್ರೀಮತಿ ಡಾ. ಕೆ ವಿದ್ಯಾಕುಮಾರಿ,ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ ಕರ್ನಾಟಕ<br>ಕರ್ನಾಟಕ ಸರ್ಕಾರ |
| ಶ್ರೀ ಮಾರುತಿ ಎಂ.ಆರ್<br>ನಿರ್ದೇಶಕರು – ಗುಣಮಟ್ಟ,<br>ಸಮಗ್ರ ಶಿಕ್ಷಣ ಕರ್ನಾಟಕ | ಶ್ರೀ ಹೆಚ್ ಎನ್ ಗೋಪಾಲಕೃಷ್ಣ<br>ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ<br>ಮತ್ತು ತರಬೇತಿ ಇಲಾಖೆ, ಕರ್ನಾಟಕ | ಶ್ರೀಮತಿ ಗೀತಾ ಎಸ್<br>ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು<br>(ಅಭಿವೃದ್ಧಿ) ಡಯಟ್, ದಾವಣಗೆರೆ |

## ಸಹಕಾರ

| | |
|---|---|
| ಶ್ರೀ ಬಿ. ಎಸ್. ಜಗದೀಶ್ವರ<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | ಶ್ರೀಮತಿ ಮಂಗಳ ಜಿ<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ತಂಡ

- ಶ್ರೀ ಶ್ರೀಧರಮಯ್ಯ.ಎಂ.ಎನ್. ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ. ಗುತ್ತೂರು, ಹರಿಹರ ತಾಲೂಕು.
- ಶ್ರೀ ಪುಷ್ಪ ಕುಮಾರ್.ಸಹ ಶಿಕ್ಷಕರು ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಅರಬಗಟ್ಟೆ, ಹೊನ್ನಾಳಿ ತಾಲೂಕು
- ಶ್ರೀ ಶಶಿಧರ.ಎ.ಪಿ. ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು,(ಪ್ರೌಢಶಾಲಾ ವಿಭಾಗ) ಚನ್ನಗಿರಿ.
- ಶ್ರೀಮತಿ ಸೌಮ್ಯ.ಎಲ್. ಸಹ ಶಿಕ್ಷಕರು. ಸರ್ಕಾರಿ ಪ್ರೌಢಶಾಲೆ ಸಾರಥಿ. ಹರಿಹರ ತಾಲೂಕು.
- ಶ್ರೀ ನಾಗರಾಜ.ಪಿ.ಎಚ್. ಸಹ ಶಿಕ್ಷಕರು. ಕರ್ನಾಟಕ ಪಬ್ಲಿಕ್ ಶಾಲೆ. ಬನ್ನಿಕೋಡು,ಹರಿಹರ ತಾಲೂಕು.
- ಶ್ರೀ ಆಂಜನೇಯ ನಾಯ್ಕ.ಎಸ್.ಆರ್.ಚಿತ್ರಕಲಾ ಶಿಕ್ಷಕರು. ಸರ್ಕಾರಿ ಪ್ರೌಢಶಾಲೆ. ದಿದ್ದಿಗಿ. ಜಗಳೂರು ತಾಲೂಕು

## ಸಂಪನ್ಮೂಲ ಪರಿಷ್ಕರಣ ತಂಡ (2024–2025)

- ಶ್ರೀ ಶಶಿಧರ ಎ.ಪಿ. ಸಹ ಶಿಕ್ಷಕರು ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ಚನ್ನಗಿರಿ
- ಶ್ರೀ ಶ್ರೀಧರಮಯ್ಯ ಎಂ.ಎನ್. ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗುತ್ತೂರು, ಹರಿಹರ ತಾಲೂಕು
- ಶ್ರೀ ನಾಗರಾಜ ಪಿ.ಎಚ್. ಸಹ ಶಿಕ್ಷಕರು ಕರ್ನಾಟಕ ಪಬ್ಲಿಕ್ ಶಾಲೆ, ಬನ್ನಿಕೋಡು, ಹರಿಹರ ತಾಲೂಕು

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

- ಶ್ರೀ ಸಂತೋಷ ನೂಲಗೇರಿ. ಸ.ಶಿ. ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಗಾಂಧೀಮೈದಾನ, ಹರಿಹರ
- ಶ್ರೀ ಶ್ರೀನಿವಾಸ. ಬಿ. ಸ.ಶಿ. ಸರ್ಕಾರಿ ಪ್ರೌಢಶಾಲೆ ಮತ್ತಿ. ದಾವಣಗೆರೆ ದಕ್ಷಿಣ ವಲಯ
- ಶ್ರೀ ಕೃಷ್ಣಮೂರ್ತಿ. ಹೆಚ್. ಸ.ಶಿ. ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ನಲ್ಲೂರು. ಚನ್ನಗಿರಿ ತಾಲ್ಲೂಕು

## ಸಮನ್ವಯ

- ಶ್ರೀಮತಿ ನಾಗಮಣಿ. ಎಂ. ಹಿರಿಯ ಸಹಾಯಕ ನಿರ್ದೇಶಕರು. ಡಿ.ಎಸ್.ಇ.ಆರ್.ಟಿ ಬೆಂಗಳೂರು
- ಶ್ರೀಮತಿ ಸಾಜಿದಾ ಬೇಗಂ. ಹಿರಿಯ ಸಹಾಯಕ ನಿರ್ದೇಶಕರು. ಡಿ.ಎಸ್.ಇ.ಆರ್.ಟಿ ಬೆಂಗಳೂರು
- ಶ್ರೀ ಎಡ್ವಿನ್ ಕ್ರಿಸ್ಟೋಫರ್. ಕಿರಿಯ ಕಾರ್ಯಕ್ರಮ ಅಧಿಕಾರಿಗಳು (ಗುಣಮಟ್ಟ). ಎಸ್.ಎಸ್.ಕೆ. ಬೆಂಗಳೂರು
- ಶ್ರೀಮತಿ ಮಂಜಮ್ಮ ಲೋಕೇಶ್. ಎಸ್. ಹಿರಿಯ ಉಪನ್ಯಾಸಕರು, ಡಯಟ್ ದಾವಣಗೆರೆ
- ಶ್ರೀ ರಾಮಕೃಷ್ಣ. ಪಿ. ಆರ್. ಉಪನ್ಯಾಸಕರು, ಡಯಟ್, ದಾವಣಗೆರೆ

ಬೆಂಬಲ: ಟ್ರಾನ್ಸ್ ಫಾರ್ಮ್ ಸ್ಕೂಲ್ಸ್

NOT TO BE REPUBLISHED @KTBS

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥ ಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು (learning gaps) ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ (foundational) ಮತ್ತು ಪೂರ್ವ-ಅಗತ್ಯ (prerequisite) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.

ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು 'ವಿದ್ಯಾರ್ಥಿ ಅಭ್ಯಾಸ ಪುಸ್ತಕ' **(Student Activity Book - SAB)** ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ-ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ:

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

NOT TO BE REPUBLISHED @KTBS

# ಪರಿವಿಡಿ

H5H1W9

ಡಿಜಿಟಲ್ ಪ್ರತಿಗಾಗಿ ಸ್ಕ್ಯಾನ್ ಮಾಡಿ

## ಬುನಾದಿ ಹಂತ


| ಕ್ರ. ಸಂ | ಅವಧಿ | ಪುಟ ಸಂಖ್ಯೆ |
|---|---|---|
| 1 | ಅಳತೆಯ ಮಾಪನಗಳು | 1 |
| 2 | ಆಮ್ಲ ಮತ್ತು ಪ್ರತ್ಯಾಮ್ಲ, ಸಸ್ಯ ಮೂಲ ಮತ್ತು ಪ್ರಾಣಿ ಮೂಲಗಳ ವರ್ಗೀಕರಣ | 6 |
| 3 | ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು | 8 |
| 4 | ಲೋಹಗಳು ಮತ್ತು ಅಲೋಹಗಳು | 11 |
| 5 | ಪೋಷಣೆ | 15 |
| 6 | ದ್ಯುತಿಸಂಶ್ಲೇಷಣೆ ಕ್ರಿಯೆ | 18 |
| 7 | ವಿದ್ಯುತ್ ಸಾಧನಗಳು ಮತ್ತು ವಿದ್ಯುತ್ ಮಂಡಲಗಳು | 22 |
| 8 | ಅಲೈಂಗಿಕ ಸಂತಾನೋತ್ಪತ್ತಿ | 24 |
| 9 | ಪಾರದರ್ಶಕ ಮತ್ತು ಅಪಾರದರ್ಶಕ ವಸ್ತುಗಳು | 28 |
| 10 | ಬೆಳಕಿನ ಪ್ರತಿಫಲನ ಮತ್ತು ನೆರಳು | 31 |


© KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ


| ಕ್ರ. ಸಂ | ಅವಧಿ | ಪುಟ ಸಂಖ್ಯೆ |
|---|---|---|
| 1 | ಪರಮಾಣು, ಅಣುಗಳು ಮತ್ತು ಸಂಕೇತಗಳು | 35 |
| 2 | ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು | 38 |
| 3 | ಆಮ್ಲ, ಪ್ರತ್ಯಾಮ್ಲಗಳ ಸಾರತೆಯ ಮಾಪನ | 43 |
| 4 | ಪ್ರಾಣಿಗಳಲ್ಲಿ ಪೋಷಣೆ | 46 |
| 5 | ಮಾನವನ ಜೀರ್ಣಾಂಗವ್ಯೂಹ | 48 |
| 6 | ಮಾನವನ ಶ್ವಾಸಾಂಗವ್ಯೂಹ | 50 |
| 7 | ಮಾನವನ ಹೃದಯ ಮತ್ತು ಸಾಗಾಣಿಕಾವ್ಯೂಹ | 53 |
| 8 | ಮಾನವನ ವಿಸರ್ಜನಾಂಗ ವ್ಯೂಹ | 56 |
| 9 | ನರವ್ಯೂಹದ ವರ್ಗೀಕರಣ | 58 |
| 10 | ವಿದ್ಯುತ್‌ವಾಹಕ ಮತ್ತು ಅವಾಹಕಗಳು | 60 |
| 11 | ವಿದ್ಯುತ್ ಆವೇಶ ಮತ್ತು ವರ್ಗಾವಣೆ | 62 |
| 12 | ವಿದ್ಯುತ್ ಸಾಮರ್ಥ್ಯದ ಮಾಪನ | 64 |
| 13 | ಲೋಹ ಮತ್ತು ಅಲೋಹಗಳ ವರ್ಗೀಕರಣ | 66 |
| 14 | ಲೋಹಗಳ ರಾಸಾಯನಿಕ ವರ್ತನೆಗಳು | 69 |
| 15 | ಲೋಹಗಳು ಮತ್ತು ಅಲೋಹಗಳ ನಶಿಸುವಿಕೆ | 71 |
| 16 | ಅಂಡಜ, ಜರಾಯುಜ ಮತ್ತು ರೂಪಪರಿವರ್ತನೆ | 73 |
| 17 | ಮಾನವನಲ್ಲಿ ಸಂತಾನೋತ್ಪತ್ತಿ | 76 |
| 18 | ದರ್ಪಣ ಮತ್ತು ಮಸೂರದ ವಿಧಗಳು | 80 |
| 19 | ಬೆಳಕಿನ ಬಹು ಪ್ರತಿಬಿಂಬಗಳು | 84 |
| 20 | ಮಾನವನ ಕಣ್ಣು | 86 |


## ಕ್ರೋಢೀಕರಣ ಹಂತ


| ಕ್ರ. ಸಂ | ಅವಧಿ | ಪುಟ ಸಂಖ್ಯೆ |
|---|---|---|
| 1 | ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು | 90 |
| 2 | ಜೀವಕ್ರಿಯೆಗಳು | 94 |
| 3 | ವಿದ್ಯುಚ್ಛಕ್ತಿ | 97 |
| 4 | ಲೋಹಗಳು ಮತ್ತು ಅಲೋಹಗಳು | 99 |
| 5 | ಬೆಳಕು, ಪ್ರತಿಫಲನ ಮತ್ತು ವಕ್ರೀಭವನ | 102 |
| 6 | ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ? | 105 |


@KTBS NOT TO BE REPUBLISHED

# ಬುನಾದಿ ಹಂತ – ಚಟುವಟಿಕೆ ಹಾಳೆ – 1

## ಅಳತೆಯ ಮಾಪನಗಳು

R7A2K9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಅಳತೆಯ ಮಾಪನಗಳನ್ನು ಗುರುತಿಸುವರು.**

ನಮ್ಮ ದೈನಂದಿನ ಜೀವನದಲ್ಲಿ ನಾವು ಅನೇಕ ಅಂಶಗಳನ್ನು ಅಳತೆ ಮಾಡುತ್ತೇವೆ. ಅಳತೆ ಎಂಬುದು ಖರೀದಿಸುವ, ಮಾರಾಟ ಮಾಡುವ, ಇಲ್ಲವೇ ಪರೀಕ್ಷಿಸುವ ಪ್ರಕ್ರಿಯೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಇಂತಹ ಮಾಪನ ವಿಧಾನವು ಹೇಗೆ ಉಪಯುಕ್ತವಾಗಿದೆ? ನೀವು ಬಳಸುವ ಮಾಪನಗಳಾವುವು? ಅದಕ್ಕಾಗಿ ಬಳಸುತ್ತಿರುವ ಸಾಧನಗಳಾವುವು? ಎಂಬುದನ್ನು ಚಟುವಟಿಕೆಗಳ ಮೂಲಕ ಅಳೆಯೋಣ.

**ಚಟುವಟಿಕೆ 1:** ಈ ಪ್ರಶ್ನೆಗಳಿಗೆ ಉತ್ತರಿಸಿ.

ನಾವು ಪ್ರತಿನಿತ್ಯ ಅನೇಕ ವಸ್ತುಗಳನ್ನು ಅಳತೆ ಮಾಡುತ್ತೇವೆ. ಅದಕ್ಕಾಗಿ ವಿವಿಧ ಸಾಧನಗಳನ್ನು ಮತ್ತು ಏಕಮಾನಗಳನ್ನು ಬಳಸುತ್ತೇವೆ ಅಥವಾ ಬಳಸುವುದನ್ನು ಗಮನಿಸಿರುತ್ತೇವೆ. ಉದಾ: ಹಾಲು – ಲೀಟರ್‌ಗಳಲ್ಲಿ, ಹೂವನ್ನು – ಮೊಳ ಇಲ್ಲವೇ ಮಾರುಗಳಲ್ಲಿ ಅಳೆಯುತ್ತೇವೆ. ಭೌತಶಾಸ್ತ್ರದಲ್ಲಿ ಏಕಮಾನವಿಲ್ಲದ ಯಾವುದೇ ಸಂಖ್ಯೆಗೆ ಬೆಲೆ ಇರುವುದಿಲ್ಲ. ನಿಮ್ಮ ಅನುಭವದ ಆಧಾರದಲ್ಲಿ ಈ ಪ್ರಶ್ನೆಗಳಿಗೆ ಉತ್ತರಿಸಿ.

1. ನಿಮ್ಮ ದೈನಂದಿನ ಜೀವನದಲ್ಲಿ ಅಳತೆ ಮಾಡಲು ನಿಮಗೆ ಅಗತ್ಯವಿರುವ ವಿವಿಧ ವಸ್ತುಗಳನ್ನು ತಿಳಿಸಿ.

   ..............................................................................................................

2. ನಿಮ್ಮ ಎತ್ತರವನ್ನು ಹೇಗೆ ಅಳೆಯುತ್ತೀರಿ?

   ..............................................................................................................

3. ಬಟ್ಟೆ ವ್ಯಾಪಾರಿಯು ನಿಮಗೆ ನಿರ್ದಿಷ್ಟ ಅಳತೆಯ ಬಟ್ಟೆಯನ್ನು ಹೇಗೆ ಅಳೆದು ಕೊಡುತ್ತಾನೆ?

   ..............................................................................................................

4. ಹಾಲು ಮಾರುವವರು ಹಾಲನ್ನು ಹೇಗೆ ಅಳೆಯುತ್ತಾರೆ?

   ..............................................................................................................

   ..............................................................................................................



5. ನಿಮಗೆ ಅಗತ್ಯವಿರುವ ತರಕಾರಿಯನ್ನು ಕೊಳ್ಳಲು ತರಕಾರಿ ಅಂಗಡಿಯವರಿಗೆ ಯಾವ ಅಳತೆ ಮಾನದಿಂದ ತೂಕ ಮಾಡಲು ಕೇಳುವಿರಿ?

   ..............................................................................................................

6. ನಿಮ್ಮ ದೈನಂದಿನ ಜೀವನದಲ್ಲಿ ಎಲ್ಲೆಲ್ಲಿ ದೂರ ಮತ್ತು ಉದ್ದವನ್ನು ಅಳೆಯುತ್ತೀರಿ?

   ..............................................................................................................

   ..............................................................................................................

7. ನೀವು ದೂರವನ್ನು ಹೇಗೆ ಅಳೆಯುತ್ತೀರಿ?

   ..............................................................................................................

   ..............................................................................................................

@KTBS NOT TO BE REPUBLISHED

8. ಈ ಚಿತ್ರಗಳು ದೂರವನ್ನು ಅಳೆಯುವ ಸಾಮಾನ್ಯವಾದ ಪದ್ಧತಿಗಳಾಗಿವೆ. ನಿಮಗೆ ಬೇಕಾದ ಬಟ್ಟೆಯನ್ನು ಅಳೆಯಲು ಯಾವ ವಿಧಾನವನ್ನು ಆಯ್ದುಕೊಳ್ಳುವಿರಿ? ಏಕೆ?



ಹೆಜ್ಜೆಗಳಿಂದ



ಕೈಯಳತೆಯ ಗೇಣು ಬಳಸಿ



ಮೀಟರ್ ಸ್ಕೇಲ್‌ನಿಂದ




ನಿಮ್ಮ ಕಂಪಾಸ್ ಸ್ಕೇಲ್‌ನಿಂದ

..........................................................................................................................................

..........................................................................................................................

9. ಯಾರಾದರೂ ಬಟ್ಟೆಯನ್ನು ಗೇಣುವಿನಿಂದ ಅಳೆದರೆ ಏನಾಗುತ್ತದೆ?

..............................................................................................................................

............................................................................................................................

**ಚಟುವಟಿಕೆ 2:** ನಾವು ಅಗತ್ಯಾನುಸಾರ ಮಾಪನಗಳನ್ನು ಬಳಸಿ ವಸ್ತುಗಳ ಅಳತೆ ಮಾಡುತ್ತೇವೆ. ಕೆಲವೊಮ್ಮೆ ಮಿಲಿಮೀಟರನ್ನು ಕೆಲವೊಮ್ಮೆ ಮೀಟರನ್ನು ಬಳಸುತ್ತೇವೆ. ಹಾಗೆಯೇ ಮಿಲಿಗ್ರಾಮ್, ಗ್ರಾಮ್, ಕಿಲೋಗ್ರಾಮ್, ಕ್ವಿಂಟಾಲ್‌ನಂತಹ ಮಾಪನಗಳನ್ನು ಬಳಸುತ್ತೇವೆ. ಅದಕ್ಕೆ ತಕ್ಕಂತೆ ಮಾಪನಾ ಸಾಧನಗಳು ನಮಗೆ ಬೇಕಾಗುತ್ತವೆ.

ಬಿಟ್ಟ ಸ್ಥಳ ಭರ್ತಿ ಮಾಡಿರಿ

- ಒಂದು ಕಿಲೋಮೀಟರ್ =--------- ಮೀಟರ್
- ಒಂದು ಕೆಜಿ =--------- ಗ್ರಾಂ
- ಒಂದು ಟನ್ =--------- ಕೆ.ಜಿ.
- ಬೆಳಕಿನ ದೂರವನ್ನು ಅಳೆಯುವ ಏಕಮಾನ =---------
- ಒಂದು ಮೈಲು =--------- ಕಿ.ಮೀ.
- ಒಂದು ಲೀಟರ್ =--------- ಮಿಲಿ ಲೀಟರ್
- ರಾಶಿ/ಗಾತ್ರ =---------
- ಓಜೋನ್ ಅಳತೆಯ ಏಕಮಾನ =---------
- ರಕ್ತದ ಒತ್ತಡವನ್ನು ಅಳೆಯುವ ಸಾಧನ =---------
- ಹೃದಯದ ಬಡಿತವನ್ನು ಅಳೆಯುವ ಸಾಧನ =---------

©KTBS NOT TO BE REPUBLISHED

ಈ ಸಾಧನಗಳ ಹೆಸರನ್ನು ಬರೆಯಿರಿ :







10. ಪರಮಾಣುವಿನ ಬಗ್ಗೆ ಹಿಂದಿನ ತರಗತಿಯಲ್ಲಿ ತಿಳಿದಿರುವಂತೆ ಎಲ್ಲಾ ದ್ರವ್ಯದ ಮೂಲ ಘಟಕಗಳೇ ಪರಮಾಣುಗಳು. ಪರಮಾಣುಗಳು ತೀರಾ ಚಿಕ್ಕವು. ನಾವು ಊಹೆ ಮಾಡಬಹುದಾದ ಅಥವಾ ಹೋಲಿಸಬಹುದಾದ ಯಾವುದೇ ವಸ್ತುವಿಗಿಂತಲೂ ಚಿಕ್ಕವು. ಪರಮಾಣು ತ್ರಿಜ್ಯವನ್ನು ನ್ಯಾನೋ ಮೀಟರ್‌ಗಳಲ್ಲಿ ಅಳೆಯುತ್ತಾರೆ. ಹಿಂದಿನ ತರಗತಿಯಲ್ಲಿ ಈ ಅಂಶಗಳನ್ನು ನೀವು ತಿಳಿದಿದ್ದೀರಿ.

11. ಈ ಕೋಷ್ಟಕವನ್ನು ಪೂರ್ಣಗೊಳಿಸಿ. ಸಾಪೇಕ್ಷ ಗಾತ್ರಗಳು : 1nm = $10^{-9}$ m

| ತ್ರಿಜ್ಯ ( ಮೀಟರ್ ಗಳಲ್ಲಿ ) | ಉದಾಹರಣೆಗಳು |
|---|---|
| $10^{-10}$ m | ಹೈಡ್ರೋಜನ್ ಪರಮಾಣು |
| $10^{-9}$ m | |
| | ಹಿಮೋಗ್ಲೋಬಿನ್ ಅಣು |
| $10^{-4}$ m | |
| | ಇರುವೆ |
| $10^{-1}$ m | |

@KTBS NOT TO BE REPUBLISHED

**ಚಟುವಟಿಕೆ 3:** ಅಳತೆ ಪಟ್ಟಿ(ಸ್ಕೇಲ್)ಯನ್ನು ಸಿದ್ಧಪಡಿಸುವ ಚಟುವಟಿಕೆಯನ್ನು ಕೈಗೊಳ್ಳೋಣ

**ವಿಧಾನ :** ಒಂದು ಗ್ರಾಫ್ ಶೀಟ್ ನಿಂದ ದಟ್ಟ ಗೆರೆಯುದ್ದಕ್ಕೂ ಪಟ್ಟಿಯನ್ನು ಕತ್ತರಿಸಿಕೊಳ್ಳಿ. ಅದರಲ್ಲಿನ 10 ಚೌಕಗಳನ್ನು ಎಣಿ–ಸಿಕೊಂಡು 1 ರಿಂದ 10 ವರೆಗೆ ಪೆನ್ಸಿಲ್ ನಿಂದ ಗುರುತು ಮಾಡಿ. ನಿಮ್ಮ ಅಳತೆ ಪಟ್ಟಿ(ಸ್ಕೇಲ್) ಸಿದ್ಧವಾಯ್ತು. ಒಂದು ಸೆಲ್ಲೋ ಟೇಪಿನ ಮೇಲೆ ಗುರುತು ಮಾಡಿದ ಗ್ರಾಫ್ ಶೀಟ್ ಪಟ್ಟಿಯನ್ನು ಅಂಟಿಸಿ. ಇದೇ ವಿಧಾನವನ್ನು ಅನುಸರಿಸಿ ಇನ್ನೂ ಉದ್ದನೆಯ ಅಳತೆ ಪಟ್ಟಿ(ಸ್ಕೇಲ್)ಯನ್ನು ತಯಾರಿಸಿಕೊಳ್ಳಲು ಪ್ರಯತ್ನಿಸಿ.




- ಪ್ರತಿ ದೊಡ್ಡ ಚೌಕದಲ್ಲಿ ಎಷ್ಟು ಸಣ್ಣ ವಿಭಾಗಗಳಿವೆ?

..........................................................................................................

- ಈ ಪಟ್ಟಿಯ ಅಡ್ಡ ಭಾಗದ ಉದ್ದ ಎಷ್ಟು?

.......................................................................................................................................

ಯಾವುದೇ ವಸ್ತುವಿನ ಉದ್ದವನ್ನು ನಿಖರವಾಗಿ ಅಳೆಯಲು ಸಾರ್ವತ್ರಿಕವಾಗಿ ಅಳತೆ ಪಟ್ಟಿ(ಸ್ಕೇಲ್)ಯನ್ನು ಬಳಸಲಾಗುತ್ತಿದೆ. ಇದರ ಸಹಾಯದಿಂದ ಅಳೆಯಬಹುದಾದ ಅತಿ ಚಿಕ್ಕ ಉದ್ದವನ್ನು "ಕನಿಷ್ಠ ಅಳತೆ" (least count) ಎನ್ನುತ್ತಾರೆ. ಈಗ ಉದ್ದವನ್ನು ಅಳೆಯುವ ಅಂತರಾಷ್ಟ್ರೀಯ ಮಾನ(SI)ವಾಗಿ ಮೀಟರನ್ನು ಒಪ್ಪಿಕೊಳ್ಳಲಾಗಿದೆ. 1 ಮೀಟರಿನಲ್ಲಿ 100 ಸೆಂಟಿಮೀಟರ್‌ಗಳಿರುತ್ತವೆ. ನೀವು ಸಿದ್ಧಪಡಿಸಿರುವ ಅಳತೆ ಪಟ್ಟಿಯ 1 ಚೌಕದ ಉದ್ದವು 1 ಸೆಂಟಿಮೀಟರ್ ಆಗಿದೆ ಎಂಬುದನ್ನು ಗಮನಿಸಿ.

**ಚಟುವಟಿಕೆ 4:** ಚಿಕ್ಕ ಮತ್ತು ದೊಡ್ಡ ಉದ್ದವನ್ನು ಅಳೆಯುವಿಕೆ.

ಒಂದು ಸೆಂಟಿಮೀಟರ್ ಎಂಬುದು ಎಷ್ಟು ಉದ್ದವನ್ನು ಹೊಂದಿದೆ? ಇದನ್ನು ತಿಳಿಯಲು ಯಾವುದೇ ಸ್ಕೇಲನ್ನು ತೆಗೆದು- ಕೊಂಡು ಅದನ್ನು ಎಚ್ಚರಿಕೆಯಿಂದ ಪರೀಕ್ಷಿಸಿ.

1. ಒಂದು 1 ಸೆಂಟಿಮೀಟರ್ ಉದ್ದದಲ್ಲಿ ಎಷ್ಟು ಸಣ್ಣ ವಿಭಾಗಳಿವೆ?

.......................................................................................................................................

2. ಪ್ರತಿ 1 ಸೆಂಟಿಮೀಟರ್ ನಲ್ಲಿ ಮಿಲಿಮೀಟರ್ ಎಂಬ ಸಣ್ಣ ವಿಭಾಗಗಳಿವೆ. ಅಂತಹ ಎಷ್ಟು ಮಿಲಿಮೀಟರ್ 1 ಸೆಂಟಿಮೀಟರ್‌ನಲ್ಲಿವೆ?

.......................................................................................................................................

3. ನೀವೇ ಸಿದ್ಧಪಡಿಸಿದ ಗ್ರಾಫ್‌ಶೀಟ್‌ನ ಸ್ಕೇಲ್‌ನಲ್ಲಿರುವ ಅತೀ ಚಿಕ್ಕ ಅಳತೆಯ ಉದ್ದ ಎಷ್ಟು? ಅದನ್ನು ಏನೆಂದು ಕರೆಯುತ್ತೀರಿ?

.......................................................................................................................................

@KTBS NOT TO BE REPUBLISHED

**ಚಟುವಟಿಕೆ 5 :** (ಎ) ಒಂದು ಮೀಟರ್ (m)ನ ಉದ್ದವನ್ನು ತಿಳಿಯಿರಿ.

ಒಂದು ಮೀಟರ್ ಸ್ಕೇಲ್‌ನ್ನು ತೆಗೆದುಕೊಂಡು ಅದನ್ನು ಗಮನವಿಟ್ಟು ಪರೀಕ್ಷಿಸಿ.

1. ಒಂದು ಮೀಟರ್ ನಲ್ಲಿ ಎಷ್ಟು ಸೆಂಟಿಮೀಟರ್(cm)ಗಳಿವೆ ?
2. ಒಂದು ಮೀಟರ್ ಎಷ್ಟು ಮಿಲಿಮೀಟರ್(mm)ಗಳನ್ನು ಹೊಂದಿದೆ ?

(ಬಿ) ಒಂದು ಕಿಲೋಮೀಟರ್ (km) ನ ಉದ್ದವನ್ನು ತಿಳಿಯಿರಿ.

ದೊಡ್ಡ ಉದ್ದವನ್ನು ಅಳೆಯಲು ಮೀಟರ್ ಮಾನವು ಅನುಕೂಲಕರವಲ್ಲ. ಉದಾಹರಣೆಗೆ, ಎರಡು ದೇಶಗಳ ನಡುವಿನ ದೂರ. ಆದ್ದರಿಂದ ಮೀಟರಿಗಿಂತ ಇನ್ನು ದೊಡ್ಡದಾದ ಮಾನವನ್ನು ಬಳಸುವುದು ಸೂಕ್ತ. ಕಿಲೋ ಅಂದರೆ ಒಂದು ಸಾವಿರ ಎಂದರ್ಥ.

ಉದಾಹರಣೆಗೆ :- 1 ಕಿಲೋಗ್ರಾಂ(kg) 1000 ಗ್ರಾಂಗಳನ್ನು ಮತ್ತು 1 ಕಿಲೋ ಮೀಟರ್ (km) 1000 ಮೀಟರ್‌ಗಳನ್ನು ಹೊಂದಿದೆ.

1kg= 1000g

1km=1000m

ಇಲ್ಲಿಯವರೆಗೆ ನೀವು ಕಲಿತಿದ್ದನ್ನು ಸ್ಮರಿಸಿಕೊಳ್ಳಿ

1 cm =__________mm

1m= ___________cm

1km=___________m

ಚಟುವಟಿಕೆ 6: ಸ್ಕೇಲ್‌ನಲ್ಲಿ ಅಳೆಯುವ ಸರಿಯಾದ ಮಾರ್ಗ

ನೇರವಾಗಿರುವ ವಸ್ತುವಿನ ಉದ್ದವನ್ನು ಅಳೆಯಬೇಕಾದರೆ ಆ ವಸ್ತುವಿಗೆ ಸಮಾಂತರವಾಗಿ ಸ್ಕೇಲನ್ನು ಇಡಿ. ನಂತರ ಆ ವಸ್ತುವಿನ ಎರಡೂ ತುದಿಗಳ ನಡುವಿನಲ್ಲಿ ಸ್ಕೇಲ್‌ನಲ್ಲಿ ಬರುವ ಸಣ್ಣ ವಿಭಾಗಗಳನ್ನು (ಮಿಲಿಮೀಟರ್ (mm) ಗಳನ್ನು) ಎಣಿಸಿ. ಈಗ ಆ ವಸ್ತುವಿನ ಉದ್ದವನ್ನು ಮಿಲಿಮೀಟರ್‌ನಲ್ಲಿ ದಾಖಲಿಸಬಹುದು.




1. ಈ ಮೊಳೆಯ ಉದ್ದವನ್ನು ಮಿಲಿಮೀಟರ್ ನಲ್ಲಿ ಬರೆಯಿರಿ :

.............................................................................................................

2. ಈ ಮೊಳೆಯ ಉದ್ದ cm ನಲ್ಲಿ

.............................................................................................................

ಪ್ರತಿ ಸಂದರ್ಭಲ್ಲಿಯೂ ಮಿಲಿಮೀಟರ್‌ನ್ನು ಎಣಿಸುವ ಅಗತ್ಯವಿಲ್ಲ, ಅದಕ್ಕಾಗಿ ಸರಳವಾದ ವಿಧಾನವಿದೆ.




ಈ ಚಿತ್ರದಲ್ಲಿ ಪೆನ್ಸಿಲ್ ನ ಒಂದು ತುದಿಯು 4.0 cm ಗುರುತಿನ ಬಳಿ ಇದೆ. ಹಾಗೆಯೇ ಅದರ ತುದಿಯು 9.8 km ಬಳಿ ಇದೆ. ಆದ್ದರಿಂದ ಪೆನ್ಸಿಲ್‌ನ ಉದ್ದ (9.8 - 4.0)= 5.8 cm . ಈಗ ಸ್ಕೇಲ್‌ನ 0 (ಸೊನ್ನೆ) ಯಿಂದ ಪೆನ್ಸಿಲನ್ನು ಇಟ್ಟು ಅದರ ಉದ್ದ 5.8cm ಇದೆಯೇ ತಾಳೆ ನೋಡಿ.

- ಇದೇ ರೀತಿ ಬೆಂಕಿಕಡ್ಡಿಯ ಉದ್ದವನ್ನು ಬರೆಯಬಲ್ಲಿರಾ?

  .............................................................................................................

- ನಿಮ್ಮ ಉತ್ತರದಲ್ಲಿ ಏಕಮಾನವನ್ನು ಬರೆಯುವುದನ್ನು ಮರೆಯಬೇಡಿ.

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ – 2

## ಆಮ್ಲ ಮತ್ತು ಪ್ರತ್ಯಾಮ್ಲ, ಸಸ್ಯ ಮೂಲ ಮತ್ತು ಪ್ರಾಣಿಮೂಲಗಳ ವರ್ಗೀಕರಣ

U6F9R8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾಫಲ : ವಿದ್ಯಾರ್ಥಿಗಳು ಕೊಟ್ಟಿರುವ ವಸ್ತುಗಳನ್ನು ಆಮ್ಲ ಪ್ರತ್ಯಾಮ್ಲಗಳಾಗಿ ವರ್ಗೀಕರಿಸುವರು & pH ಮೌಲ್ಯ ತಿಳಿಯುವರು.

ಆಮ್ಲ ಮತ್ತು ಪ್ರತ್ಯಾಮ್ಲಗಳ ಗುಣಲಕ್ಷಣಗಳನ್ನು ಹಿಂದಿನ ತರಗತಿಯಲ್ಲಿ ಅಭ್ಯಸಿಸಿದ್ದೀರಿ ಹಾಗೂ ಅವುಗಳ ಅಣುಸೂತ್ರಗಳನ್ನು ತಿಳಿದುಕೊಂಡಿದ್ದೀರಿ.

**ಚಟುವಟಿಕೆ 1 :**

ಈ ಕೆಳಗಿನವುಗಳನ್ನು ಆಮ್ಲ ಮತ್ತು ಪ್ರತ್ಯಾಮ್ಲಗಳಾಗಿ ವಿಂಗಡಿಸಿ.

$HCl$, $HNO_3$, $NaHCO_3$, $Na_2CO_3$, $KOH$, $H_2SO_4$, $CH_3COOH$, $NaOH$, $Mg(OH)_2$

| ಆಮ್ಲಗಳು | ಪ್ರತ್ಯಾಮ್ಲಗಳು |
|---|---|
| | |

@KTBS NOT TO BE REPUBLISHED

ಹೊಸ ವಸ್ತುಗಳು ಉಂಟಾಗುವ ಯಾವುದೇ ಕ್ರಿಯೆಯನ್ನು ರಾಸಾಯನಿಕ ಕ್ರಿಯೆ ಎನ್ನುವರು. ಇದರಲ್ಲಿ ಪ್ರಮುಖವಾಗಿ ನಾಲ್ಕು ವಿಧಗಳಿವೆ. ಅವುಗಳು ರಾಸಾಯನಿಕ ಸಂಯೋಗ, ರಾಸಾಯನಿಕ ವಿಭಜನೆ, ರಾಸಾಯನಿಕ ಸ್ಥಾನಪಲ್ಲಟ ಮತ್ತು ರಾಸಾಯನಿಕ ದ್ವಿವಿಭಜನೆ/ ರಾಸಾಯನಿಕ ದ್ವಿಸ್ಥಾನಪಲ್ಲಟ.

**ಚಟುವಟಿಕೆ 2 :**

ಈ ರಾಸಾಯನಿಕ ಕ್ರಿಯೆಗಳನ್ನು ಗಮನಿಸಿ ಅವುಗಳು ಯಾವ ವಿಧಗಳಿಗೆ ಉದಾಹರಣೆಯಾಗಿವೆ ಎಂಬುದನ್ನು ಬರೆಯಿರಿ.

1. ಸೋಡಿಯಂ ಆಕ್ಸೈಡ್ ಉಂಟಾಗುವಿಕೆ.
2. ಪೊಟ್ಯಾಸಿಯಂ ನೀರಿನ ಜೊತೆ ವರ್ತಿಸುವುದು.
3. ಬೆಳ್ಳಿಯ ಕ್ಲೋರೈಡ್‌ನ್ನು ಸೂರ್ಯನ ಬೆಳಕಿಗೆ ತೆರೆದಿಡುವುದು.
4. ಕ್ಯಾಲ್ಸಿಯಂ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದ ಜೊತೆ ವರ್ತಿಸುವುದು.
5. ಕ್ಯಾಲ್ಸಿಯಂ ಕಾರ್ಬೋನೇಟ್‌ನ್ನು ಕಾಸುವುದು.
6. ಬೇರಿಯಂ ಸಲ್ಫೇಟ್ ಮತ್ತು ಸೋಡಿಯಂ ಕ್ಲೋರೈಡ್ ಉಂಟಾಗುವಿಕೆ.
7. ಮೆಗ್ನೀಸಿಯಂ ತಂತಿ ಉರಿಸುವುದು.

| ರಾಸಾಯನಿಕ ಕ್ರಿಯೆಯ ವಿಧಗಳು | ಉದಾಹರಣೆಗಳು |
|---|---|
| | |
| | |
| | |
| | |

pH ಎಂದರೆ ಹೈಡ್ರೋಜನ್ ಅಯಾನು ಪ್ರಬಲತೆ ಎಂದರ್ಥ. ಈ pH ನ ವ್ಯಾಪ್ತಿ 0–14. ಇದರಲ್ಲಿ 7 ತಟಸ್ಥ, 7 ಕ್ಕಿಂತ ಕಡಿಮೆ ಆಮ್ಲ ಹಾಗೂ 7 ಕ್ಕಿಂತ ಹೆಚ್ಚು ಪ್ರತ್ಯಾಮ್ಲ.

**ಚಟುವಟಿಕೆ 3 :**ಇವುಗಳನ್ನು pH ಮೌಲ್ಯದ ಆಧಾರದ ಮೇಲೆ ಆಮ್ಲ ಮತ್ತು ಪ್ರತ್ಯಾಮ್ಲಗಳಾಗಿ ವರ್ಗೀಕರಿಸಿ. ಕೊಟ್ಟಿರುವ ಪಿಹೆಚ್‌ನ ಆಧಾರದ ಮೇಲೆ ಅತೀ ಹೆಚ್ಚು ಹಾಗೂ ಅತೀ ಕಡಿಮೆ ಸಾರತೆ ಹೊಂದಿರುವ ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಬರೆಯಿರಿ. pH 3, 6, 9, 11, 7, 5, 13, 6.5, 7.8, 7

| ಆಮ್ಲದ pH ಮೌಲ್ಯ | | ಪ್ರತ್ಯಾಮ್ಲದ pH ಮೌಲ್ಯ | |
|---|---|---|---|
| | | | |
| | | | |
| ಅತಿ ಕಡಿಮೆ ಸಾರತೆ ಹೊಂದಿರುವ ಆಮ್ಲದ pH | ಅತಿ ಹೆಚ್ಚು ಸಾರತೆ ಹೊಂದಿರುವ ಆಮ್ಲದ pH | ಅತಿ ಕಡಿಮೆ ಸಾರತೆ ಹೊಂದಿರುವ ಪ್ರತ್ಯಾಮ್ಲದ pH | ಅತಿ ಹೆಚ್ಚು ಸಾರತೆ ಹೊಂದಿರುವ ಪ್ರತ್ಯಾಮ್ಲದ pH |

@KTBS NOT TO BE REPUBLISHED

**ಕಲಿಕಾಫಲ 2 : ಸಸ್ಯ ಮೂಲ ಮತ್ತು ಪ್ರಾಣಿ ಮೂಲ ಆಹಾರ ಪದಾರ್ಥಗಳನ್ನು ವಿಂಗಡಿಸುವರು.**

ಜೀವಿಗಳಿಗೆ ಉತ್ತಮ ಆರೋಗ್ಯ, ಶಕ್ತಿ ಹಾಗೂ ಬೆಳವಣಿಗೆಗೆ ಆಹಾರ ಅತಿ ಅವಶ್ಯಕ. ಈ ಆಹಾರ ಪದಾರ್ಥಗಳು ನಮಗೆ ಸಸ್ಯ ಹಾಗೂ ಪ್ರಾಣಿಮೂಲಗಳಿಂದ ದೊರೆಯುತ್ತವೆ.

**ಚಟುವಟಿಕೆ 1 :** ಇವುಗಳನ್ನು ಸಸ್ಯ ಮತ್ತು ಪ್ರಾಣಿ ಮೂಲ ಆಹಾರ ಪದಾರ್ಥಗಳಾಗಿ ವಿಂಗಡಿಸಿ.

ಮೊಟ್ಟೆ, ಮೀನು, ಮೂಲಂಗಿ, ಗೆಣಸು, ಮಾಂಸ, ಸೊಪ್ಪು, ಅಕ್ಕಿ, ಜೋಳ, ಹಾಲು

| ಸಸ್ಯಮೂಲ | ಪ್ರಾಣಿಮೂಲ |
|---|---|
| | |

## ಬುನಾದಿ ಹಂತ – ಚಟುವಟಿಕೆ ಹಾಳೆ – 3
## ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

M5C9J5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾಫಲ : ವಿದ್ಯಾರ್ಥಿಗಳು ಭೌತ ಬದಲಾವಣೆ ಹಾಗೂ ರಾಸಾಯನಿಕ ಬದಲಾವಣೆಗಳನ್ನು ಗುರುತಿಸುವರು ಮತ್ತು ವರ್ಗೀಕರಿಸುವರು.

@KTBS NOT TO BE REPUBLISHED

**ಚಟುವಟಿಕೆ 1:**

ನಮ್ಮ ಸುತ್ತಲಿನ ವಸ್ತುಗಳನ್ನು ಅಧ್ಯಯನ ಮಾಡಲು ನಾವು ವರ್ಗೀಕರಿಸುತ್ತೇವೆ. ನಮ್ಮ ಸುತ್ತಲಿನ ಪದಾರ್ಥಗಳಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ನಾವು ಗಮನಿಸುತ್ತೇವೆ. ಕೆಲವು ಬದಲಾವಣೆಗಳು ಹೊಸ ವಸ್ತುಗಳ ರಚನೆಗೆ ಕಾರಣವಾಗುತ್ತವೆ. ನಾವು ಅವುಗಳನ್ನು ರಾಸಾಯನಿಕ ಬದಲಾವಣೆಗಳು ಎಂದು ಕರೆಯುತ್ತೇವೆ. ಇನ್ನೂ ಕೆಲವು ಬದಲಾವಣೆಗಳು ಹೊಸ ಪದಾರ್ಥಗಳ ರಚನೆಗೆ ಕಾರಣವಾಗುವುದಿಲ್ಲ, ಅಂತಹ ಬದಲಾವಣೆಗಳನ್ನು ಭೌತಿಕ ಬದಲಾವಣೆಗಳು ಎಂದು ಕರೆಯಲಾಗುತ್ತದೆ.

ಹೊಸ ವಸ್ತು ಎಂದರೇನು?

ಇದನ್ನು ಅರ್ಥಮಾಡಿಕೊಳ್ಳಲು ನಾವು ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳೋಣ. ನಾವು ಕಾಗದವನ್ನು ಸಣ್ಣ ತುಂಡುಗಳಾಗಿ ಹರಿದು ಹಾಕುತ್ತೇವೆ ಎಂದು ಭಾವಿಸೋಣ. ನಮ್ಮಲ್ಲಿ ಇನ್ನೂ ಕಾಗದದ ತುಂಡುಗಳಿವೆ. ಅವುಗಳನ್ನು ಸುಟ್ಟರೆ, ನಮಗೆ ಸಿಗುವ ವಸ್ತು ಕಪ್ಪು ಪುಡಿಯಾಗಿರುತ್ತದೆ.

**ಚಟುವಟಿಕೆ 1:**

1. ಹೊಸ ವಸ್ತು ಹೇಗೆ ರೂಪುಗೊಂಡಿತು?

______________________________

______________________________

2. ಕಾಗದವನ್ನು ಸಣ್ಣ ತುಂಡುಗಳಾಗಿ ಹರಿದು ಹಾಕುವುದು ಯಾವ ರೀತಿಯ ಬದಲಾವಣೆಯಾಗಿದೆ?

______________________________

______________________________

3. ಕಾಗದವನ್ನು ಉರಿಸುವುದು ಯಾವ ರೀತಿಯ ಬದಲಾವಣೆಗೆ ಉದಾಹರಣೆಯಾಗಿದೆ?

______________________________

______________________________

______________________________

ಭೌತಿಕ ಬದಲಾವಣೆಯಲ್ಲಿ, ಬದಲಾವಣೆಗೆ ಒಳಗಾಗುವ ವಸ್ತುವು ಅದರ ಗುಣಲಕ್ಷಣಗಳನ್ನು ಕಳೆದುಕೊಳ್ಳುವುದಿಲ್ಲ. (ಆಕಾರ, ಗಾತ್ರ, ಸ್ಥಿತಿಯಲ್ಲಿ ಬದಲಾವಣೆ ಕಂಡುಬರುತ್ತದೆ) ಉದಾಹರಣೆಗೆ ಕಾಗದ

ಹರಿದ ನಂತರವೂ ಕಾಗದವಾಗಿಯೇ ಉಳಿಯುತ್ತದೆ. ರಾಸಾಯನಿಕ ಬದಲಾವಣೆಯ ಸಂದರ್ಭದಲ್ಲಿ, ಬದಲಾವಣೆಗೆ ಒಳಗಾಗುವ ವಸ್ತುವು ಅದರ ಗುಣಲಕ್ಷಣಗಳನ್ನು ಕಳೆದುಕೊಳ್ಳುತ್ತದೆ. ಉದಾಹರಣೆಗೆ, ಕಪ್ಪು ವಸ್ತುವಿನ ರಚನೆಗೆ ಕಾರಣವಾಗುವ ಕಾಗದದ ಸುಡುವಿಕೆ ಅದುವೇ 'ಕಾರ್ಬನ್'.

**ಚಟುವಟಿಕೆ 2:**

ನಿಮ್ಮ ತರಗತಿಯ ಕಪ್ಪುಹಲಗೆಯ ಸಮೀಪದಲ್ಲಿ, ನೆಲದಲ್ಲಿ ಬಿದ್ದಿರುವ ಸೀಮೆಸುಣ್ಣದ ಪುಡಿಯನ್ನು ಸಂಗ್ರಹಿಸಿ ಅಥವಾ ಸೀಮೆ ಸುಣ್ಣದ ಚೂರನ್ನು ಜಜ್ಜಿ ಪುಡಿ ಮಾಡಿ. ಸ್ವಲ್ಪ ನೀರನ್ನು ಸೇರಿಸಿ ಕಣಕ (ಹೂರಣ) ವನ್ನು ತಯಾರಿಸಿ. ಇದನ್ನು ಉಂಡೆ ಮಾಡಿ ಸೀಮೆ ಸುಣ್ಣದ ಆಕಾರಕ್ಕೆ ತನ್ನಿ. ಇದನ್ನು ಒಣಗಲುಬಿಡಿ.

1. ನೀವು ಪುಡಿಯಿಂದ ಸೀಮೆ ಸುಣ್ಣವನ್ನು ಪುನಃ ಪಡೆಯಲು ಸಾಧ್ಯವಾಯಿತೆ?
   ಗಮನಿಸಿದ ಬದಲಾವಣೆಯನ್ನು ಬರೆಯಿರಿ.

   ________________________________________________

   ________________________________________

**ಚಟುವಟಿಕೆ 3:** ಭೌತ ಬದಲಾವಣೆ: ಸಕ್ಕರೆಯ ದ್ರಾವಣ ಮತ್ತು ಉಪ್ಪಿನ ದ್ರಾವಣ ತಯಾರಿಸಿ, ಇಂಗಿಸುವ ಪ್ರಯೋಗ ಕೈಗೊಂಡ ನಂತರ ಕೆಳಗಿನ ಕೋಷ್ಟಕವನ್ನು ತಯಾರಿಸಿ.

| ಬದಲಾವಣೆ | ವಸ್ತು ಕರಗಿದೆ / ಕರಗಿಲ್ಲ | ದ್ರಾವಣವನ್ನು ಕಾಯಿಸಿದ ನಂತರ ಪುನಃ ಕರಗಿದವಸ್ತು ದೊರೆಯಿತೇ? | ವಸ್ತುವಿನ ಗುಣದಲ್ಲೇನಾ-ದರು ಬದಲಾವಣೆಯಾ-ಯಿತೆ? | ಭೌತ ಬದಲಾವಣೆ |
|---|---|---|---|---|
| ಸಕ್ಕರೆಯನ್ನು ನೀರಿಗೆ ಸೇರಿಸುವುದು. | ಕರಗಿದೆ | ಹೌದು | ಇಲ್ಲ | |
| ಅಡುಗೆ ಉಪ್ಪನ್ನು ನೀರಿಗೆ ಸೇರಿಸುವುದು. | | | | |

@KTBS NOT TO BE REPUBLISHED

**ಚಟುವಟಿಕೆ 4:** ರಾಸಾಯನಿಕ ಬದಲಾವಣೆ.

- ರಾಸಾಯನಿಕ ಬದಲಾವಣೆಗಳು ನಮ್ಮ ಜೀವನದಲ್ಲಿ ತುಂಬಾ ಮಹತ್ವವಾದವು,ಎಲ್ಲಾ ಹೊಸ ಪದಾರ್ಥಗಳು ರಾಸಾಯನಿಕ ಬದಲಾವಣೆಯ ಪರಿಣಾಮದಿಂದಲೇ ಉತ್ಪತ್ತಿಯಾದವುಗಳು.
- ಉದಾಹರಣೆಗೆ ನಮ್ಮ ದೇಹದಲ್ಲಿ ಆಹಾರ ಜೀರ್ಣವಾಗುವುದು, ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ರಕ್ತ, ಹಣ್ಣುಗಳು ಮಾಗುವುದು, ದ್ರಾಕ್ಷಾರಸದ ಹುದುಗುವಿಕೆ ಇತ್ಯಾದಿ, ಪ್ರಯೋಗವನ್ನು ಗಮನಿಸಿದ ನಂತರ ಕೋಷ್ಟಕವನ್ನು ತುಂಬಿರಿ. (ಶಿಕ್ಷಕರ ಮಾರ್ಗದರ್ಶನದಲ್ಲಿ ಪ್ರಯೋಗಮಾಡುವುದು).
- ಬೇಕಾಗಿರುವ ಸಾಮಗ್ರಿಗಳು – ಬೆಂಕಿ ಪೊಟ್ಟಣ, ಕಾಗದ
- ಒಂದು ಕಾಗದವನ್ನು ಉರಿಸಿದಾಗ ಅದು ಸಂಪೂರ್ಣವಾಗಿ ಬೂದಿಯಾಗಿ ಮಾರ್ಪಾಡಾಗುತ್ತದೆ.
- ಈ ಕ್ರಿಯೆಯಲ್ಲಿ ಆದ ಬದಲಾವಣೆ ಯಾವುದು? ಈ ಕ್ರಿಯೆಯಿಂದ ಪಡೆದ ವಸ್ತುವಿನಿಂದ ನಾವು ಕಾಗದವನ್ನು ಮರಳಿ ಪಡೆಯಬಹುದೇ?
- ಇದರಂತೆ, ಅಗರಬತ್ತಿ ಉರಿಸುವುದು, ಬಿಸಿ ಹಾಲಿಗೆ ನಿಂಬೆರಸ ಬೆರೆಸುವುದು, ಮೆಗ್ನೀಷಿಯಂ ತಂತಿಯನ್ನು ಉರಿಸುವುದು. (ಈ ಪ್ರಯೋಗಗಳನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡುವುದು).

ಈ ಕೆಳಗಿನ ಕೋಷ್ಟಕವನ್ನು ತುಂಬಿರಿ. ಸೂಚನೆ– ಶಿಕ್ಷಕರು ಪರಾವರ್ತ್ಯ ಬದಲಾವಣೆಯ ಬಗ್ಗೆ ಮಾಹಿತಿ ನೀಡುವುದು.

| ಕ್ರ ಸಂ | ಬದಲಾವಣೆ. | ತೆಗೆದುಕೊಂಡ ವಸ್ತು ಹಾಗೆಯೇ ಉಳಿದಿದೆ | ಹೊಸ ವಸ್ತು ಉಂಟಾಗಿದೆ | ಪರಾವರ್ತ್ಯ ಬದಲಾವಣೆ | ಭೌತ |
|---|---|---|---|---|---|
| 1 | ಕಾಗದವನ್ನು ಸುಡುವುದು | ಇಲ್ಲ | ಹೌದು | ಇಲ್ಲ | ಇಲ್ಲ |
| 2 | ಅಗರಬತ್ತಿ ಉರಿಸುವುದು | | | | |
| 3 | ಬಿಸಿ ಹಾಲಿಗೆ ನಿಂಬೆರಸ ಬೆರೆಸುವುದು | | | | |
| 4 | ಮೆಗ್ನೀಷಿಯಂ ತಂತಿ ಉರಿಸುವುದು | | | | |

**ಚಟುವಟಿಕೆ 5:** ಕಬ್ಬಿಣ ತುಕ್ಕು ಹಿಡಿಯುವಿಕೆ

ಕಬ್ಬಿಣವು ವಾತಾವರಣದಲ್ಲಿನ ತೇವಾಂಶ ಹಾಗೂ ಆಮ್ಲಜನಕದೊಂದಿಗೆ ವರ್ತಿಸಿದಾಗ ಕಂದು ಬಣ್ಣದ ಕಬ್ಬಿಣದ ಆಕ್ಸೈಡ್ ಉತ್ಪತ್ತಿಯಾಗುತ್ತದೆ. ಈ ಬದಲಾವಣೆಯನ್ನೇ ಕಬ್ಬಿಣದ ತುಕ್ಕು ಹಿಡಿಯುವಿಕೆ ಎನ್ನುವರು. ಕೋಷ್ಟಕದಲ್ಲಿ ಗಮನಿಸಿದ ಅಂಶಗಳನ್ನು ಬರೆಯಿರಿ. (ಸೂಚನೆ: ಈ ಪ್ರಯೋಗ ಮಾಡಲು ಒಂದು ಹೊಸ ಮೊಳೆ ಮತ್ತು ತುಕ್ಕು ಹಿಡಿದ ಮೊಳೆಯನ್ನು ತೆಗೆದುಕೊಳ್ಳಿ)

| ಕಬ್ಬಿಣದ ಮೊಳೆ ಪ್ರಾರಂಭದಲ್ಲಿ / ತುಕ್ಕು ಹಿಡಿದ ನಂತರ | ಹೊಳಪು | ಕಠಿಣತೆ | ಬಣ್ಣ |
|---|---|---|---|
| ಪ್ರಾರಂಭದಲ್ಲಿ ಕಬ್ಬಿಣದ ಮೊಳೆಯ ಸ್ವರೂಪ | | | |
| ಕಬ್ಬಿಣ ತುಕ್ಕು ಹಿಡಿದ ನಂತರ ಮೊಳೆಯ ಸ್ವರೂಪ | | | |

@KTBS
NOT TO BE REPUBLISHED

**ಚಟುವಟಿಕೆ 6 :** ಭೌತ ಬದಲಾವಣೆ ಮತ್ತು ರಾಸಾಯನಿಕ ಬದಲಾವಣೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಕೆಳಗಿನ ಕೋಷ್ಟಕದಲ್ಲಿ ಪೂರ್ತಿಗೊಳಿಸಿ. (ಹೌದು ಅಥವಾ ಇಲ್ಲ ಎಂದು ಬರೆಯುವುದು)

| ವಿವರ | ಭೌತ ಬದಲಾವಣೆ | ರಾಸಾಯನಿಕ ಬದಲಾವಣೆ |
|---|---|---|
| ಹೊಸ ವಸ್ತು ಉಂಟಾಗುವುದಿಲ್ಲ. | | |
| ಹೊಸ ವಸ್ತು ಉಂಟಾಗುತ್ತದೆ. | ಇಲ್ಲ | |
| ವಸ್ತುವಿನ ಆಕಾರ ಮತ್ತು ಗಾತ್ರದಲ್ಲಿ ಮಾತ್ರ ಬದಲಾವಣೆಯಾಗುವುದು. | | |
| ಬದಲಾವಣೆಯ ಸಂದರ್ಭದಲ್ಲಿ ಬಣ್ಣದಲ್ಲಿ ಬದಲಾವಣೆಯಾಗುವುದು. | | ಹೌದು |

## ಬುನಾದಿಹಂತ – ಚಟುವಟಿಕೆ ಹಾಳೆ – 4
## ಲೋಹಗಳು ಮತ್ತು ಅಲೋಹಗಳು

T7B2K5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ನಮ್ಮ ಸುತ್ತಮುತ್ತಲಿನ ವಸ್ತುಗಳನ್ನು ಗುಣಲಕ್ಷಣಗಳ ಆಧಾರದ ಮೇಲೆ ಲೋಹ–ಅಲೋಹಗಳೆಂದು ವರ್ಗೀಕರಿಸುವರು.

**ಚಟುವಟಿಕೆ 1:** ನೀವು ಈಗಾಗಲೇ ಲೋಹಗಳು ಮತ್ತು ಅಲೋಹಗಳ ಬಗ್ಗೆ ತಿಳಿದಿರುವಿರಿ. ವಸ್ತುಗಳನ್ನು ಅವುಗಳ ಗುಣ–ಗಳಿಗನುಗುಣವಾಗಿ ಲೋಹಗಳು ಮತ್ತು ಅಲೋಹಗಳಾಗಿ ವಿಂಗಡಿಸುತ್ತೇವೆ. ಲೋಹಗಳು ಗಟ್ಟಿಯಾಗಿರುತ್ತವೆ (ಬಹುತೇಕ), ತನ್ಯತೆ ಮತ್ತು ಕುಟ್ಯತೆ ಸ್ವಭಾವ ಹೊಂದಿವೆ. ಆದರೆ ಅಲೋಹಗಳು ಇಂತಹ ಗುಣಗಳನ್ನು ಹೊಂದಿರುವುದಿಲ್ಲ.

ಇಂತಹ ಹಲವಾರು ವಸ್ತುಗಳನ್ನು ನಿಮ್ಮ ಪರಿಸರದಲ್ಲಿ ಗಮನಿಸಿರುವಿರಿ. ನೀವು ಅವುಗಳನ್ನು ಬಳಸಿಯೂ ಇರಬಹುದು. ಅಂತಹ ಯಾವುದಾದರೂ ಕನಿಷ್ಠ ತಲಾ ಐದು ವಸ್ತುಗಳನ್ನು ಹೆಸರಿಸಿ. ಗುಣಗಳ ಆಧಾರದಲ್ಲಿ ಅವುಗಳನ್ನು ಲೋಹಗಳು ಮತ್ತು ಅಲೋಹಗಳಾಗಿ ವರ್ಗೀಕರಿಸಿ.

@KTBS NOT TO BE REPUBLISHED

| ಕ್ರ.ಸಂ | ಲೋಹಗಳು | ಅಲೋಹಗಳು |
|---|---|---|
| 1 | | |
| 2 | | |
| 3 | | |
| 4 | | |
| 5 | | |

ಲೋಹ ಮತ್ತು ಅಲೋಹಗಳು ಜೀವಿಗಳು ಹಾಗೂ ಪರಿಸರದಲ್ಲಿ ನಡೆಯುವ ಕೆಲವು ಕ್ರಿಯೆಗಳಲ್ಲಿಯೂ ಇರುತ್ತವೆ. ಇಂತಹ ಕೆಲವು ಕ್ರಿಯೆಗಳನ್ನು ನೆನಪಿಸಿಕೊಳ್ಳಿ. ಉದಾಹರಣೆಗೆ, – ರಕ್ತದಲ್ಲಿ ಕಬ್ಬಿಣದ ಅಂಶವಿದೆ.

**ಚಟುವಟಿಕೆ 2 :** ಈ ಮುಂದೆ ನೀಡಿರುವ ಕ್ರಿಯೆಗಳಲ್ಲಿ ಇರುವ ಅಲೋಹಗಳನ್ನು ಹೆಸರಿಸಿ.

| ಕ್ರಿಯೆಗಳು | ಅಲೋಹಗಳು |
|---|---|
| ಉಸಿರಾಟ | |
| ದ್ಯುತಿ ಸಂಶ್ಲೇಷಣೆ | |
| ಜಠರಾಮ್ಲ | |

ಲೋಹ ಮತ್ತು ಅಲೋಹಗಳ ಗುಣಗಳು ಹಾಗೂ ಅವುಗಳನ್ನು ಒಳಗೊಳ್ಳುವ ಕೆಲವು ಕ್ರಿಯೆಗಳ ಬಗ್ಗೆ ತಿಳಿದಿರುವಿರಿ.

ಮುಂದುವರೆದು ಲೋಹ ಮತ್ತು ಅಲೋಹಗಳನ್ನು ಆಭರಣಗಳ ತಯಾರಿಕೆ, ಪಟಾಕಿ ಮದ್ದು ಇತ್ಯಾದಿ ಕೆಲವು ಕ್ರಿಯೆಗಳಲ್ಲಿಯೂ ಬಳಸಲಾಗುತ್ತದೆ. ಇಲ್ಲಿ ಅಂತಹ ಕೆಲವು ಕ್ರಿಯೆಗಳನ್ನು ನೀಡಿದೆ. ಅವುಗಳಲ್ಲಿ ಬಳಸಲಾಗುವ ಲೋಹ/ಅಲೋಹಗಳನ್ನು ಗುರುತಿಸಿ ಬರೆಯಿರಿ.

**ಚಟುವಟಿಕೆ 3 :** ಇವುಗಳಲ್ಲಿ ಬಳಸುವ / ಇರುವ, ಸಾಮಾನ್ಯ ಲೋಹ / ಅಲೋಹಗಳನ್ನು ಹೆಸರಿಸಿ.

| ಕ್ರ.ಸಂ | ವಸ್ತುಗಳು | ಲೋಹ/ಅಲೋಹ |
|---|---|---|
| 1 | ಉಂಗುರ/ಬಳೆ | |
| 2 | ಇದ್ದಿಲು | |
| 3 | ಮೊಳೆ | |
| 4 | ಪೆನ್ಸಿಲ್ ಮದ್ದು | |
| 5 | ಉಷ್ಣತಾಮಾಪಕದಲ್ಲಿರುವ ದ್ರವ | |
| 6 | ತಂತಿ ಬೇಲಿ | |
| 7 | ವಿದ್ಯುತ್ ತಂತಿ | |
| 8 | ಕುಕ್ಕರ್ | |
| 9 | ಕಲ್ಲಿದ್ದಲು | |
| 10 | ಪಟಾಕಿ ಮದ್ದು | |

@KTBS NOT TO BE REPUBLISHED

**ಚಟುವಟಿಕೆ 4 :** ಪೆಟ್ಟಿಗೆ, ಕಬ್ಬಿಣದ ವಸ್ತು – ಇವುಗಳನ್ನು ತೆಗೆದುಕೊಳ್ಳಿ. ಅವುಗಳನ್ನು ಒಂದು ಸುತ್ತಿಗೆ ಅಥವಾ ಇತರೆ ಯಾವುದಾದರೂ ವಸ್ತುವಿನಿಂದ ಹೊಡೆಯಿರಿ. ಉಂಟಾಗುವ ಶಬ್ದವನ್ನು ಗಮನಿಸಿ. ಉಂಟಾದ ಶಬ್ದದಲ್ಲಿ ಯಾವುದಾದರೂ ವ್ಯತ್ಯಾಸವನ್ನು ಗಮನಿಸಿದಿರಾ? ಏಕೆ? ಉತ್ತರಿಸಿ.

....................................................................................................

....................................................................................................

....................................................................................................

....................................................................................................

ನೀವು ಈಗಾಗಲೇ ಹಿಂದಿನ ತರಗತಿಗಳಲ್ಲಿ ಲೋಹ ಮತ್ತು ಅಲೋಹಗಳ ಭೌತಗುಣಗಳನ್ನು ಅಭ್ಯಸಿಸಿದ್ದೀರ. ಉದಾಹರಣೆಗೆ ಲೋಹಗಳು ಗಟ್ಟಿಯಾಗಿರುತ್ತವೆ (ಸೋಡಿಯಂ, ಪೊಟ್ಯಾಸಿಯಂ, ಚಿನ್ನ, ಬೆಳ್ಳಿ ಬಿಟ್ಟು), ಲೋಹಗಳು ತನ್ಯತೆ ಮತ್ತು ಕುಟ್ಯತೆ ಗುಣ ಹೊಂದಿವೆ, ಉಷ್ಣವಾಹಕಗಳು, ವಿದ್ಯುತ್‌ವಾಹಕಗಳು. ಆದರೆ ಅಲೋಹಗಳು ಇಂತಹ ಗುಣಗಳನ್ನು ಹೊಂದಿರುವುದಿಲ್ಲ.

**ಚಟುವಟಿಕೆ 5:** ಮುಂದಿನ ವಸ್ತುಗಳು ಹೊಂದಿರಬಹುದಾದ ಒಂದು/ಎರಡು ಭೌತಗುಣಗಳನ್ನು ಪಟ್ಟಿಮಾಡಿ.

| ಕ್ರಮ ಸಂಖ್ಯೆ | ವಸ್ತುಗಳು | ಭೌತ ಗುಣಗಳು |
|---|---|---|
| 1 | ವಜ್ರ | |
| 2 | ಕಲ್ಲಿದ್ದಲು | |
| 3 | ಕಬ್ಬಿಣದ ಗಂಟೆ | |
| 4 | ಚಿನ್ನದ ಉಂಗುರ | |
| 5 | ಕಬ್ಬಿಣದ ಬೇಲಿ | |
| 6 | ತಾಮ್ರದ ಪಾತ್ರೆ | |

**ಚಟುವಟಿಕೆ 6 :** ಬೇಕಾಗುವ ಸಾಮಗ್ರಿಗಳು : 1 ಸರಳ ವಿದ್ಯುತ್‌ಮಂಡಲ, ಒಣ ಕಟ್ಟಿಗೆ, ರಬ್ಬರ್, ಕಬ್ಬಿಣದ ಮೊಳೆ, ಗ್ರಾಫೈಟ್, ಪ್ಲಾಸ್ಟಿಕ್ ಕಡ್ಡಿ, ಬ್ಲೇಡ್,

ವಿದ್ಯುತ್ ಮಂಡಲದ ಚಿತ್ರ →




@KTBS NOT TO BE REPUBLISHED

ವಿಧಾನ: ಒಂದು ಸರಳ ವಿದ್ಯುತ್‌ಮಂಡಲ ರಚಿಸಿ. ಚಿತ್ರದಲ್ಲಿ ತೋರಿಸಿರುವಂತೆ ಅದರ ಸ್ವಿಚ್ ತೆಗೆದು ಅದರ ಜಾಗದಲ್ಲಿ ಮೇಲ್ಕಾಣಿಸಿದ ವಸ್ತುಗಳನ್ನು ಒಂದರ ನಂತರ ಒಂದನ್ನು ಜೋಡಿಸಿ. ಯಾವ ಸಂದರ್ಭದಲ್ಲಿ ದೀಪ ಬೆಳಗುತ್ತದೆ? ಯಾವ ಸಂದರ್ಭದಲ್ಲಿ ಬೆಳಗುವುದಿಲ್ಲ? ದಾಖಲಿಸಿ ಕಾರಣ ಕೊಡಿ.

(ಶಿಕ್ಷಕರಿಗೆ ಸೂಚನೆ : ಈ ಪ್ರಯೋಗವನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡುವುದು. ಬ್ಯಾಟರಿ, ಬ್ಲೇಡ್, ಪಿನ್ ಬಳಸುವಾಗ ತೀವ್ರ ಎಚ್ಚರಿಕೆಯಿಂದ ಇರುವುದು)

| ಒಣಕಟ್ಟಿಗೆ | ರಬ್ಬರ್ | ಕಬ್ಬಿಣದ ಮೊಳೆ | ಗ್ರಾಫೈಟ್ | ಪ್ಲಾಸ್ಟಿಕ್ ಕಡ್ಡಿ | ಬ್ಲೇಡ್ | ಪಿನ್ನು |
|---|---|---|---|---|---|---|
| | | | | | | |

ಕಾರಣ: ..........................................................................................

..........................................................................................

**ಚಟುವಟಿಕೆ 7:**

ಸಾಧಾರಣ ಉದ್ದವಿರುವ ಒಂದು ಅಲ್ಯುಮಿನಿಯಂ (ಅಥವಾ ಯಾವುದಾದರೂ ಲೋಹ) ತಂತಿಯ ಒಂದು ತುದಿಯನ್ನು ಕೈಯಲ್ಲಿ ಹಿಡಿದು, ಮತ್ತೊಂದು ತುದಿಯನ್ನು ಉರಿಯುತ್ತಿರುವ ಮೇಣದ ಬತ್ತಿಯಿಂದ ಕಾಯಿಸಿ. ಹಾಗೆಯೇ ಒಂದು ಒಣ ಮರದ ಕೋಲನ್ನು ಒಂದು ತುದಿಯಲ್ಲಿ ಹಿಡಿದು, ಮತ್ತೊಂದು ತುದಿಯಲ್ಲಿ ಕಾಯಿಸಿ. ಎರಡೂ ಸಂದರ್ಭಗಳಲ್ಲಿ ಬಿಸಿಯಾಗುವ ಅನುಭವವನ್ನು ಗಮನಿಸಿ. ಯಾವ ಸಂದರ್ಭದಲ್ಲಿ ಬಿಸಿಯ ಅನುಭವವಾಯಿತು? ಇದಕ್ಕೆ ಕಾರಣವೇನು? ಎಂಬುದನ್ನು ಗುರುತಿಸಿ ನಿಮ್ಮ ತೀರ್ಮಾನವನ್ನು ಬರೆಯಿರಿ.

**ತೀರ್ಮಾನ:**

..........................................................................................................................................

..........................................................................................................................................






ಸಾಮಾನ್ಯವಾಗಿ ಲೋಹಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಯುವ ಬಿಂದುವನ್ನು ಹೊಂದಿವೆ. (ಗ್ಯಾಲಿಯಂ ಮತ್ತು ಸೀಸಿಯಂ ಬಿಟ್ಟು) ಹಾಗಾಗಿ ಅವು ಬೇಗ ದ್ರವರೂಪಕ್ಕೆ ಬರುವುದಿಲ್ಲ ಹಾಗೂ ದ್ರವರೂಪದಿಂದ ಆವಿರೂಪಕ್ಕೂ ಬೇಗ ಹೋಗುವುದಿಲ್ಲ.

**ಚಟುವಟಿಕೆ 8 :** ಮುಂದಿನ ಲೋಹಗಳ ಕರಗುವ ಬಿಂದು ಬರೆದು, ಇವುಗಳಲ್ಲಿ ಅತಿ ಹೆಚ್ಚಿನ ಮತ್ತು ಅತಿ ಕಡಿಮೆ ಕರಗುವ ಬಿಂದು ಹೊಂದಿರುವ ಲೋಹವನ್ನು ಹೆಸರಿಸಿ .

| ಕ್ರಮ ಸಂಖ್ಯೆ | ಲೋಹಗಳು | ಕರಗುವ ಬಿಂದು |
|---|---|---|
| 1 | ಕಬ್ಬಿಣ | 1535°C |
| 2 | ತಾಮ್ರ | |
| 3 | ಗ್ಯಾಲಿಯಂ | |
| 4 | ಸೀಸಿಯಂ | |
| 5 | ಪೊಟ್ಯಾಸಿಯಂ | |
| 6 | ಸೋಡಿಯಂ | |

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ – 5

## ಪೋಷಣೆ

W6G9R4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಸ್ವಪೋಷಕಗಳು ಮತ್ತು ಪರಪೋಷಕಗಳನ್ನು ವ್ಯತ್ಯಸಿಸುವರು ಹಾಗೂ ದ್ಯುತಿಸಂಶ್ಲೇಷಣೆಯನ್ನು ಅರ್ಥೈಸಿಕೊಳ್ಳುವರು.**

ವಿದ್ಯಾರ್ಥಿಗಳೇ, ನೀವು ಈಗಾಗಲೇ ಹಿಂದಿನ ತರಗತಿಯಲ್ಲಿ ಜೀವಿಗಳಿಗೆ ಜೀವಿಸಲು ಬೇಕಾದ ಅವಶ್ಯಕ ಅಂಶಗಳು, ಆಹಾರ ದೊರೆಯುವ ಮೂಲ ಹಾಗೂ ಸಸ್ಯಗಳು ಆಹಾರ ತಯಾರಿಸುವ ವಿಧಾನವನ್ನು ತಿಳಿದುಕೊಂಡಿರುತ್ತೀರಿ. ಜೀವಿಗಳಿಗೆ ಶಕ್ತಿ, ಬೆಳವಣಿಗೆ ಮತ್ತು ಆರೋಗ್ಯಕ್ಕಾಗಿ ಆಹಾರ ಅವಶ್ಯಕ.

ಚಟುವಟಿಕೆ 1:

1. ಜೀವಿಗಳು ಜೀವಿಸಲು ಅವಶ್ಯಕವಾದ ಅಂಶಗಳನ್ನು ಪಟ್ಟಿಮಾಡಿ.

_______________

_______________

_______________

2. ನಮಗೆ ಆಹಾರ ಯಾವುದರಿಂದ ದೊರೆಯುತ್ತದೆ?

_______________

3. ನಾವು ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿ. ಹಾಗೂ ಅವುಗಳ ಮೂಲಗಳನ್ನು ಬರೆಯಿರಿ.

| ಸೇವಿಸುವ ಆಹಾರ | ಆಹಾರದ ಮೂಲ |
|---|---|
| | |

**ಚಟುವಟಿಕೆ 2 :**

ಮುಂದೆ ಹೆಸರಿಸಲಾದ ಜೀವಿಗಳು ಸೇವಿಸುವ ಆಹಾರ ಪದಾರ್ಥಗಳನ್ನು ಬರೆದು ಅವುಗಳ ಮೂಲಗಳನ್ನು ತಿಳಿಸಿ.

| ಜೀವಿ | ಸೇವಿಸುವ ಆಹಾರ | ಮೂಲ |
|---|---|---|
| ಜಿಂಕೆ | | |
| ಸಿಂಹ | | |
| ಅಮೀಬಾ | | |

@KTBS NOT TO BE REPUBLISHED

**ಚಟುವಟಿಕೆ 3 :**

1. ನಮಗೆ ಜೀವಿಸಲು ಆಹಾರ ಬೇಕು. ಸಸ್ಯಗಳು ಜೀವಿಸಲು ಆಹಾರ ಬೇಕೇ? ( ಸುಗಮಕಾರರ ಸಹಾಯದಿಂದ ಉತ್ತರಿಸಿ)

2. ಸಸ್ಯಗಳು ಆಹಾರವನ್ನು ಹೇಗೆ ಪಡೆಯುತ್ತವೆ? ಯೋಚಿಸಿ.

**ಇದಕ್ಕಾಗಿ ಒಂದು ರೋಲ್ ಪ್ಲೇ ಮಾಡೋಣ.**

**ಚಟುವಟಿಕೆ 4:**

ದ್ಯುತಿಸಂಶ್ಲೇಷಣೆ ಕ್ರಿಯೆಯ ರೋಲ್ ಪ್ಲೇ.

(ವಿದ್ಯಾರ್ಥಿಗಳನ್ನು 5 ಗುಂಪು ಮಾಡುವ ಮೂಲಕ ರೋಲ್‌ಪ್ಲೇ ಮಾಡಿಸುವುದು.)

**ಕ್ಲೋರೋಫಿಲ್:** ಏ! ಹಸಿರು ಸಸ್ಯ , ಕಾರ್ಬನ್ ಡೈ ಆಕ್ಸೈಡ್ ಎಲ್ಲಿದೆ? ಯಾಕೋ ಆಟ ಆಡಕ್ಕೆ ಬಂದಿಲ್ಲ.?

**ಹಸಿರು ಎಲೆ:** ನಾನು ಬರೊಲ್ಲ . ಅವನು ನನಗೂ ಇಷ್ಟ ಇಲ್ಲ. ಮಾನವರಿಗೂ ಇಷ್ಟ ಇಲ್ಲ. ಅವನು ಒಳ್ಳೆಯವನೂ ಅಲ್ಲ. ನಾನು ಅವನ ಗೆಳೆಯನೂ ಅಲ್ಲ. (ಅಲ್ಲಿಗೆ ಸೂರ್ಯ ಮತ್ತು ನೀರು ಬರುವರು.)

**ಕ್ಲೋರೋಫಿಲ್** : ಹಾಯ್ ಗೆಳೆಯರೇ

**ಸೂರ್ಯ** : ಎಲ್ಲರಿಗೂ ನಮಸ್ಕಾರ, ನಾನು ಸ್ವಲ್ಪ ತಡವಾಗಿ ಬಂದಿದ್ದೇನೆ ಕ್ಷಮಿಸಿ. ಕಾರ್ಬನ್ ಡೈ ಆಕ್ಸೈಡ್ ಎಲ್ಲಿದೆ?

(ಉತ್ತರ ನೀಡದೆ ಪರಸ್ಪರರ ಮುಖ ನೋಡಿ)

**ನೀರು:** ಸರಿ ಬನ್ನಿ, ಎಲ್ಲರೂ ಒಟ್ಟಿಗೆ ಆಟ ಆಡೋಣ. (ಹಸಿರು ಎಲೆಗಳು, ಸೂರ್ಯ ಮತ್ತು ನೀರು ಸ್ವಲ್ಪ ಸಮಯದವರೆಗೆ ಆಟವಾಡುತ್ತಾರೆ. ನಂತರ ಹಸಿರು ಎಲೆಗಳು ಹಸಿವಿನಿಂದ ದಣಿಯುತ್ತವೆ.)

**ಹಸಿರು ಎಲೆ:** ನನಗೆ ತುಂಬಾ ಹಸಿವಾಗಿದೆ.

**ಕ್ಲೋರೋಫಿಲ್:** ಹೇ! ನಾವೆಲ್ಲರೂ ಸೇರಿ ಅಡುಗೆ ತಯಾರಿಸೋಣ. ಹಸಿರು ಎಲೆಯೇ ನಾನು ನಿಮಗೆ ಸಹಾಯ ಮಾಡುತ್ತೇನೆ.

**ಸೂರ್ಯ ಮತ್ತು ನೀರು** : ಹಾ! ನಾವು ಕೂಡ ಸಹಾಯ ಮಾಡುತ್ತೇವೆ.

**ಹಸಿರು ಎಲೆ** : (ಬೇಸರದ ಮುಖ ಮಾಡಿ ) ನನಗೆ ಆಹಾರ ತಯಾರಿಸಲು ಆಗುತ್ತಿಲ್ಲ.

**ಕಾರ್ಬನ್ ಡೈ ಆಕ್ಸೈಡ್:** (ದೀರ್ಘ ಉಸಿರನ್ನು ಬಿಡುತ್ತಾ) ನನ್ನ ಎಲ್ಲಾ ಗೆಳೆಯರೇ, ಆಟ ಆಡೋದು ಮುಗಿಯಿತೇ? ನಾನು ಪಾಪಾಸ್ ಕಳ್ಳಿಗೆ ಆಹಾರ ತಯಾರಿಸಲು ಸಹಾಯ ಮಾಡುತ್ತಿದ್ದೆ.

**ನೀರು:** ಪಾಪ, ಹಸಿರು ಎಲೆಗೆ ತುಂಬಾ ಹಸಿವಾಗಿದೆಯಂತೆ. ಬನ್ನಿ ಎಲ್ಲರೂ, ಆಹಾರ ತಯಾರಿಸೋಣ.

(ಎಲ್ಲರೂ ಸಂತೋಷದಿಂದ ಆಹಾರ ತಯಾರಿಸುವರು)

**ಕ್ಲೋರೋಫಿಲ್** : ನೋಡು ಹಸಿರು ಎಲೆ. ಕಾರ್ಬನ್ ಡೈ ಆಕ್ಸೈಡ್ ಸರಿ ಇಲ್ಲ ಎಂದೆ, ಆದರೆ ಅವನಿಲ್ಲದೆ ಆಹಾರ ತಯಾರಿಸಲು ಸಾಧ್ಯವಾಗಲೇ ಇಲ್ಲ. ಅವನು ಹೇಗೆ ಸಹಾಯ ಮಾಡಿದ. ಯಾರ ಬಗ್ಗೆನೂ ಮಾತನಾಡಬಾರದು ಎಂದು.

**ಹಸಿರು ಎಲೆ:** ಹೌದು ಕ್ಲೋರೋಫಿಲ್. ಕಾರ್ಬನ್ ಡೈ ಆಕ್ಸೈಡ್ ನನ್ನನ್ನು ದಯವಿಟ್ಟು ಕ್ಷಮಿಸು ನಾನು ನಿನ್ನನ್ನು ತಪ್ಪಾಗಿ ಭಾವಿಸಿದ್ದೆ, ಆದರೆ ನೀನು ನನಗೆ ತುಂಬಾ ಸಹಾಯ ಮಾಡಿದೆ. (ಎಲ್ಲರು ಸಂತೋಷದಿಂದ ಬಾಳುವರು.)

@KTBS NOT TO BE REPUBLISHED

ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ಆಕ್ಸಿಜನ್ ಉತ್ಪತ್ತಿಯಾಗುತ್ತದೆ. ಪ್ರಯೋಗದ ವೀಡಿಯೋ ವೀಕ್ಷಿಸಿ.





ಕ್ಲೋರೋಪ್ಲಾಸ್ಟ್‌ನಲ್ಲಿ ಕ್ಲೋರೋಫಿಲ್ ಎ, ಕ್ಲೋರೋಫಿಲ್ ಬಿ, ಕ್ಯಾರೋ-ಟಿನಾಯ್ಡ್ ಹಾಗೂ  ಕ್ಸಾಂಥೋಫಿಲ್ ಎಂಬ ವರ್ಣಕಗಳಿರುತ್ತವೆ. ಆದರೆ, ಕ್ಲೋರೋಫಿಲ್ ಬಿ, ಕ್ಯಾರೋಟಿನಾಯ್ಡ್ ಹಾಗೂ  ಕ್ಸಾಂಥೋಫಿಲ್ ಈ ವರ್ಣಕಗಳು ಸೂರ್ಯನ ಬೆಳಕನ್ನು ಹೀರಿಕೊಂಡು ಕೋರೋಫಿಲ್ ಎ ಗೆ ಕೊಡುತ್ತವೆ. ಹಾಗೂ ನೇರವಾಗಿ ದ್ಯುತಿಸಂಶ್ಲೇಷಣೆಯಲ್ಲಿ ತೊಡಗುವುದಿಲ್ಲ. ಆದ್ದರಿಂದ ಕ್ಲೋರೋಫಿಲ್ ಬಿ, ಕ್ಯಾರೋಟಿನಾಯ್ಡ್ ಹಾಗೂ  ಕ್ಸಾಂಥೋ-ಫಿಲ್ ಗಳನ್ನು ಸಹಾಯಕ ವರ್ಣಕಗಳು ಎನ್ನುವರು.

@KTBS NOT TO BE REPUBLISHED

# ಬುನಾದಿಹಂತ – ಚಟುವಟಿಕೆ ಹಾಳೆ – 6

## ದ್ಯುತಿಸಂಶ್ಲೇಷಣೆ ಕ್ರಿಯೆ

L4J4E9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಸ್ವಪೋಷಕಗಳು ಮತ್ತು ಪರಪೋಷಕಗಳನ್ನು ವ್ಯತ್ಯಸಿಸುವರು ಹಾಗೂ ದ್ಯುತಿಸಂಶ್ಲೇಷಣೆಯನ್ನು ಅರ್ಥೈಸಿಕೊಳ್ಳುವರು.**

ವಿದ್ಯಾರ್ಥಿಗಳೇ, ನೀವು ಈಗಾಗಲೇ ಹಿಂದಿನ ತರಗತಿಯಲ್ಲಿ ಜೀವಿಗಳಿಗೆ ಜೀವಿಸಲು ಬೇಕಾದ ಅವಶ್ಯಕ ಅಂಶಗಳು, ಆಹಾರ ದೊರೆಯುವ ಮೂಲ ಹಾಗೂ ಸಸ್ಯಗಳು ಆಹಾರ ತಯಾರಿಸುವ ವಿಧಾನವನ್ನು ತಿಳಿದುಕೊಂಡಿದ್ದೀರಿ. ಜೀವಿಗಳಿಗೆ ಶಕ್ತಿ, ಬೆಳವಣಿಗೆ ಮತ್ತು ಆರೋಗ್ಯಕ್ಕಾಗಿ ಆಹಾರ ಅವಶ್ಯಕ.

**ಚಟುವಟಿಕೆ 1:**

ಸಸ್ಯಗಳು ಆಹಾರ ತಯಾರಿಸಲು ಅವಶ್ಯಕವಾದ ವಸ್ತುಗಳನ್ನು ಪಟ್ಟಿಮಾಡಿ. ಅವುಗಳನ್ನು ಪಡೆಯುವ ಮೂಲ ಬರೆಯಿರಿ.

| ಅವಶ್ಯಕವಾದ ವಸ್ತುಗಳು | ಮೂಲ |
|---|---|
| | |

- ಆವರಣದಲ್ಲಿನ ಪದಗಳನ್ನು ಬಳಸಿ ಸಮೀಕರಣ ಪೂರ್ಣಗೊಳಿಸಿ.

( ಕಾರ್ಬನ್ ಡೈ ಆಕ್ಸೈಡ್, ಆಕ್ಸಿಜನ್, ಗ್ಲುಕೋಸ್, ನೀರು )

ಸೂರ್ಯನ ಬೆಳಕು

..............................+........................ ⟶ ............................... +...........................

ಪತ್ರಹರಿತ್ತು

ಸಸ್ಯಗಳು
ದ್ಯುತಿಸಂಶ್ಲೇಷಣೆಗೆ ಕಾರ್ಬನ್ ಡೈ ಆಕ್ಸೈಡ್ ಬಳಸಿಕೊಳ್ಳುತ್ತವೆ,
ಹಾಗಾದರೆ ಉಸಿರಾಟಕ್ಕೆ ಯಾವ ಅನಿಲವನ್ನು ಬಳಸಿಕೊಳ್ಳುತ್ತವೆ.?

@KTBS NOT TO BE REPUBLISHED

- ಹಸಿರು ಎಲೆಗಳಿರುವ ಸಸ್ಯಗಳಲ್ಲಿ ಮಾತ್ರವೇ ದ್ಯುತಿಸಂಶ್ಲೇಷಣೆ ನಡೆಯುತ್ತದೆಯೇ? ಶಿಕ್ಷಕರೊಂದಿಗೆ ಚರ್ಚಿಸಿ.

..................................................................................................................................

..................................................................................................................................

.................................................................................................



ನಿಮಗಿದು ಗೊತ್ತೇ?

ರಾಸಾಯನಿಕ ವಿಶ್ಲೇಷಣೆ

ಭೂಮಿಯ ಮೇಲಿನ ಎಲ್ಲಾ ಉತ್ಪಾದಕರು ಸೂರ್ಯನನ್ನು ಅವಲಂಬಿಸಿಲ್ಲ. ಭೂಮಿ ಮತ್ತು ಸಮುದ್ರದಲ್ಲಿನ ಸಲ್ಫರ್ ಬ್ಯಾಕ್ಟೀರಿಯಾಗಳು ರಾಸಾಯನಿಕ ಸಂಯುಕ್ತಗಳನ್ನು ಒಡೆಯುವ ಮೂಲಕ ಶಕ್ತಿಯನ್ನು ಉತ್ಪಾದಿಸುತ್ತಾರೆ. ಈ ಕ್ರಿಯೆಯನ್ನು ಕೀಮೋಸಿಂಥೆಸಿಸ್ ಎನ್ನುವರು.

ಸಸ್ಯ: ...
ಅಂದರೆ ಅವು ಬೇರೆ ಜೀವಿಗಳ ಮೇಲೆ ಅವಲಂಬಿತವಾಗಿರುತ್ತದೆ.

NOT TO BE REPUBLISHED @KTBS

**ಚಟುವಟಿಕೆ 2 :** ಸಸ್ಯಗಳಲ್ಲಿ ಕಂಡುಬರುವ ಇತರೆ ಪೋಷಣಾ ವಿಧಾನಗಳನ್ನು ತಿಳಿಸಿ.

**ಉದಾಹರಣೆ** : ಪರಾವಲಂಬಿ ಸಸ್ಯ–ಕಸ್ಕ್ಯೂಟ ಇದೇ ರೀತಿ ಮುಂದಿನವುಗಳಿಗೆ ಉದಾಹರಣೆ ಕೊಡಿ.




**ಚಟುವಟಿಕೆ 3 :**

ಪರಾವಲಂಬಿ ಪೋಷಣೆಯ ಕುರಿತಾದ QR ಕೋಡ್ ವೀಡಿಯೋವನ್ನು ವೀಕ್ಷಿಸಿ, ಮತ್ತು ಚಿತ್ರವನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ.



- ಚಿತ್ರದಲ್ಲಿ ಹಳದಿ ಬಣ್ಣದ ಸಸ್ಯ ಆಹಾರವನ್ನು ಹೇಗೆ ಪಡೆಯುತ್ತದೆ? ಆಲೋಚಿಸಿ ಉತ್ತರಿಸಿ.

........................................................................................................

........................................................................................

- ಪರಾವಲಂಬಿಗಳು ಎಂದರೇನು?

........................................................................................................

..........................................................................................

**ಚಟುವಟಿಕೆ 4 :** ಮುಂದಿನ ಚಿತ್ರದಲ್ಲಿ ಕೀಟಾಹಾರಿ ಸಸ್ಯವನ್ನು ಹೆಸರಿಸಿ.ಕೀಟಾಹಾರಿ ಸಸ್ಯಗಳು ಪೋಷಣೆಯನ್ನು ಪಡೆಯುವ ವೀಡಿಯೋವನ್ನು ವೀಕ್ಷಿಸಿ.





- ಈ ಸಸ್ಯವು ಹಸಿರಾಗಿದ್ದು ದ್ಯುತಿಸಂಶ್ಲೇಷಣೆ ನಡೆಸಿದರೂ ಕೀಟಗಳನ್ನೇಕೆ ತಿನ್ನುತ್ತವೆ?

..........................................................................................

..........................................................................................

**ಚಟುವಟಿಕೆ 5 :** ನೀವೇ ಪ್ರಯೋಗ ಮಾಡಿ.

ಬ್ರೆಡ್ಡಿನ ಚೂರೊಂದನ್ನು ನೀರಿನಿಂದ ಒದ್ದೆ ಮಾಡಿ, 2 ರಿಂದ 3 ದಿನಗಳವರೆಗೆ ಬೆಚ್ಚಗಿನ ತೇವಭರಿತ ಸ್ಥಳದಲ್ಲಿ ಇಡಿ. ಪ್ರತಿ ದಿನ ಬ್ರೆಡ್ಡಿನ ಮೇಲ್ಮೈನಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿ. ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬ್ರೆಡ್ಡಿನ ಮೇಲೆ ಬೆಳೆದಿರುವ ಜೀವಿಯನ್ನು ಹೆಸರಿಸಿ.

........................................................................................................

..........................................................................................

NOT TO BE REPUBLISHED ©KTBS

2. ಇಂತಹ ಜೀವಿಗಳನ್ನು ಇನ್ನೆಲ್ಲಿ ನೋಡಬಹುದು? ತಿಳಿಸಿ.

..........................................................................................................

..........................................................................................

3. ಈ ಜೀವಿಗಳು ತಮ್ಮ ಪೋಷಣೆಯನ್ನು ಹೇಗೆ ನಡೆಸುತ್ತವೆ? ವಿವರಿಸಿ.

..........................................................................................................

..........................................................................................................

..........................................................................................................

..................................................................

4. ಈ ಪೋಷಣೆಯನ್ನು ಏನೆಂದು ಕರೆಯುವರು?

...............................................................................................

## ಪ್ರಾಣಿಗಳಲ್ಲಿ ಪರಪೋಷಣೆ

ಇದೊಂದು ವಿಧದ ಪೋಷಣೆಯಾಗಿದ್ದು, ಇಲ್ಲಿ ಜೀವಿಗಳು ತಮ್ಮ ಆಹಾರವನ್ನು ಹೊರಗಿನ ಮೂಲಗಳಿಂದ ಪಡೆಯುತ್ತವೆ. ಸಾವಯವ ಪೋಷಕಾಂಶಗಳಿಗಾಗಿ ಹೊರಗಿನ ಮೂಲವನ್ನು ಅವಲಂಬಿಸಿರುವ ಜೀವಿಗಳಿಗೆ ಪರಪೋಷಕಗಳು ಎನ್ನುವರು. ಪರಪೋಷಕಗಳನ್ನು ಭಕ್ಷಕರು ಎಂದೂ ಕರೆಯುತ್ತಾರೆ.

©KTBS NOT TO BE REPUBLISHED

**ಚಟುವಟಿಕೆ 6 :**

ಮುಂದೆ ಕೊಟ್ಟಿರುವ ಜೀವಿಗಳನ್ನು ಬಾಹ್ಯ ಪರಾವಲಂಬಿಗಳು ಹಾಗೂ ಆಂತರಿಕ ಪರಾವಲಂಬಿಗಳಾಗಿ ವರ್ಗೀ-ಕರಿಸಿ. (ಹೇನು, ಪ್ಲಾಸ್ಮೋಡಿಯಂ, ಜಂತುಹುಳು, ಉಣ್ಣೆ, ಟ್ರೈಪನೋಜೋಮ, ಚಿಗಟ)

| ಆಂತರಿಕ ಪರಾವಲಂಬಿಗಳು | ಬಾಹ್ಯ ಪರಾವಲಂಬಿಗಳು |
|---|---|
| | |
| | |
| | |

## ಬುನಾದಿ ಹಂತ – ಚಟುವಟಿಕೆ ಹಾಳೆ – 7

# ವಿದ್ಯುತ್ ಸಾಧನಗಳು ಮತ್ತು ವಿದ್ಯುತ್ ಮಂಡಲಗಳು

Q5A4VZ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ವಿದ್ಯುತ್ ಸಾಧನಗಳು ಮತ್ತು ವಿದ್ಯುತ್ ಮಂಡಲಗಳನ್ನು ಗುರುತಿಸಿ ಅವುಗಳ ರಚನೆಯನ್ನು ವಿವರಿಸುವರು.**

**ಚಟುವಟಿಕೆ 1:** ವಿದ್ಯುತ್ ಸಾಧನಗಳು

ನಮ್ಮ ದೈನಂದಿನ ಜೀವನದಲ್ಲಿ ವಿದ್ಯುಚ್ಛಕ್ತಿಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಮ್ಮ ಬಹುತೇಕ ಕೆಲಸಗಳು ಈ ಶಕ್ತಿಯನ್ನು ಅವಲಂಬಿಸಿವೆ. ವಿದ್ಯುಚ್ಛಕ್ತಿಯು ಅನುಕೂಲಕರ ಮೂಲ ಎಂದು ಪರಿಗಣಿತವಾಗಿದೆ. ಕಾರಣ

ಎ)ವಿವಿಧ ವಿಧಾನಗಳಿಂದ ಇದನ್ನು ತಯಾರಿಸಬಹುದು.

ಬಿ)ದೂರದ ತಾಣಗಳಿಗೆ ತಂತಿಗಳ ಮೂಲಕ ಸಾಗಿಸಬಹುದು.

ಸಿ)ಸುಲಭವಾಗಿ ಇನ್ನೊಂದು ರೂಪಕ್ಕೆ ಪರಿವರ್ತಿಸಬಹುದು.

ವಿದ್ಯುತ್ ಆವೇಶಗಳ ಚಲನಶಕ್ತಿಯಿಂದ ಉಂಟಾಗುವ ಶಕ್ತಿಯನ್ನು ವಿದ್ಯುಚ್ಛಕ್ತಿ ಎನ್ನುತ್ತೇವೆ. ಈ ವಿದ್ಯುಚ್ಛಕ್ತಿಯನ್ನು ಬಳಸಿ ಕಾರ್ಯ ನಿರ್ವಹಿಸುವ ಅನೇಕ ಸಾಧನಗಳನ್ನು ನೀವು ಮನೆ, ಶಾಲೆ, ಬೀದಿಯಲ್ಲಿ ನೋಡಿರುತ್ತೀರಿ.

ನೀವು ನೋಡಿರುವ ವಿದ್ಯುತ್ ಸಾಧನಗಳನ್ನು ಆಯಾ ಪಟ್ಟಿಯಲ್ಲಿ ಹೆಸರಿಸಿ.

| ಮನೆ | ಬೀದಿ | ಶಾಲೆ |
|---|---|---|
| | | |
| | | |
| | | |
| | | |

@KTBS NOT TO BE REPUBLISHED

ಈ ಮೇಲಿನ ಪಟ್ಟಿಯಲ್ಲಿ ಹೆಚ್ಚಾಗಿ ಬಳಸಲಾಗುತ್ತಿರುವ ಯಾವುದಾದರೂ ನಾಲ್ಕು ಸಾಧನಗಳ ಹೆಸರನ್ನು ಇಲ್ಲಿ ಬರೆದು ಅವುಗಳ ಒಂದು ಉಪಯೋಗವನ್ನು ತಿಳಿಸಿ.

| ಕ್ರ ಸಂ | ಹೆಸರು | ಉಪಯೋಗ |
|---|---|---|
| | | |
| | | |
| | | |
| | | |

**ಚಟುವಟಿಕೆ 2:** ವಿದ್ಯುತ್ ಸಾಧನಗಳು.

ಮನೆಯಲ್ಲಿ ವಿವಿಧ ರೀತಿಯ ವಿದ್ಯುತ್ ಸಾಧನಗಳನ್ನು ನೀವು ಗಮನಿಸಿರುವಿರಿ, ಅದರಲ್ಲಿ ಬೆಳಕಿನ ಸಾಧನ ಮತ್ತು ಉಷ್ಣದ ಸಾಧನ ಮುಖ್ಯವಾದುವು. ವಿದ್ಯುತ್ ಇಲ್ಲದಾಗ ಬಳಸುವ ಟಾರ್ಚ್ ಲ್ಯಾಂಪನ್ನು ನೋಡಿದ್ದೀರಿ ,ಆದರೆ ವಿದ್ಯುತ್ ಸಂಪರ್ಕ ಇಲ್ಲದೆಯೂ ಈ ಟಾರ್ಚ್ ಹೇಗೆ ಕಾರ್ಯ ನಿರ್ವಹಿಸುತ್ತದೆ ? ಯೋಚಿಸಿ.

ಎ) ಇಲ್ಲಿ ನೀಡಿರುವ ವಿದ್ಯುತ್ ಸಾಧನಗಳ ಹೆಸರು ಬರೆದು ಭಾಗಗಳನ್ನು ಗುರುತಿಸಿ. ಅವುಗಳ ಕಾರ್ಯವನ್ನು ತಿಳಿಸಿ.

| | |
|---|---|
|  |  |
| ಎ)..........<br>ಬಿ) ..........<br>ಸಿ) .......... | ಎ)..........<br>ಬಿ) ..........<br>ಸಿ).......... |
| | |
| 1. | 2. |

@KTBS NOT TO BE REPUBLISHED

**ಚಟುವಟಿಕೆ 3: ವಿದ್ಯುತ್ ಮಂಡಲ ಪರಿಚಯ :** ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎನ್ನುತ್ತಾರೆ . ಇದರಲ್ಲಿ ಎರಡು ವಿಧ ಇರುತ್ತದೆ. ಎ)ಪೂರ್ಣ ಮಂಡಲ ಬಿ)ಅಪೂರ್ಣ ಮಂಡಲ.
ಒಂದು ಮಂಡಲದ ಈ ವ್ಯವಸ್ಥೆಯನ್ನು ನಿರ್ವಹಿಸುವ ಸಾಧನವನ್ನು ಸ್ವಿಚ್ ಎನ್ನುತ್ತಾರೆ.

- ನಿಮಗೆ ನೀಡಿರುವ ವಸ್ತುಗಳನ್ನು ಬಳಸಿ ಒಂದು ವಿದ್ಯುತ್ ಮಂಡಲವನ್ನು ರಚಿಸಿ.
- ನೀವು ರಚಿಸಿದ ವಿದ್ಯುತ್ ಮಂಡಲದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.

ವಸ್ತುಗಳು : ತಾಮ್ರದ ತಂತಿ, ಸ್ವಿಚ್, ಶುಷ್ಕಕೋಶ, ವಿದ್ಯುತ್ ಬಲ್ಬ್, ಪಿನ್

| | |
|---|---|
| | |

## ಬುನಾದಿ ಹಂತ – ಚಟುವಟಿಕೆ ಹಾಳೆ – 8

## ಅಲೈಂಗಿಕ ಸಂತಾನೋತ್ಪತ್ತಿ

A9IZZ7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಅಲೈಂಗಿಕ ಸಂತಾನೋತ್ಪತ್ತಿಯಲ್ಲಿ ಕಾಯಜ ಸಂತಾನೋತ್ಪತ್ತಿ ಮತ್ತು ಹೂವಿನ ರಚನೆ ಬಗ್ಗೆ ಅರಿಯುವರು.**

ಸಂತಾನೋತ್ಪತ್ತಿಯು ಜೀವನ ಕ್ರಿಯೆಗಳ ಒಂದು ಭಾಗವಾಗಿದ್ದು ಎರಡು ವಿಧಗಳಿಂದಾಗಿದೆ. ಅದು ಲೈಂಗಿಕ ಮತ್ತು ಅಲೈಂಗಿಕ ಸಂತಾನೋತ್ಪತ್ತಿ ಎಂದು ಹಿಂದಿನ ತರಗತಿಗಳಲ್ಲಿ ಅಧ್ಯಯನ ಮಾಡಲಾಗಿದೆ. ಲೈಂಗಿಕ ಕ್ರಿಯೆಯು ಹೆಣ್ಣು ಮತ್ತು ಗಂಡು ಲಿಂಗಾಣುಗಳಿಂದ ನಡೆಯುತ್ತದೆ. ಅಲೈಂಗಿಕ ಸಂತಾನೋತ್ಪತ್ತಿಯಲ್ಲಿ ಬೀಜಗಳ ಉತ್ಪತ್ತಿಯಿಲ್ಲದೇ ಹೊಸ ಸಸ್ಯಗಳು ಹುಟ್ಟುತ್ತವೆ. ಕಾಯಜ ಸಂತಾನೋತ್ಪತ್ತಿಯು ಅಲೈಂಗಿಕ ಸಂತಾನೋತ್ಪತ್ತಿಯ ಒಂದು ವಿಧವಾಗಿದೆ. ಇಲ್ಲಿ ಬೇರು, ಕಾಂಡ, ಎಲೆ, ಮೊಗ್ಗುಗಳಿಂದ ಹೊಸಗಿಡಗಳು ಹುಟ್ಟುತ್ತವೆ. ಈ ವಿಧಾನದಲ್ಲಿ ಮೊಗ್ಗುವಿಕೆ, ತುಂಡಾಗುವಿಕೆ, ಬೀಜಕಗಳ ಉತ್ಪತ್ತಿ, ವಿದಳನ, ದ್ವಿವಿದಳನ. ಬಹುವಿದಳನ ಕಂಡುಬರುತ್ತವೆ. ಹೂವು ಸಸ್ಯದ ಸಂತಾನೋತ್ಪತ್ತಿ ಭಾಗವಾಗಿದ್ದು ಇದರ ಆಧಾರದ ಮೇಲೆ ಸಸ್ಯದ ವರ್ಗೀಕರಣವನ್ನು ಮಾಡಬಹುದಾಗಿದೆ. ಹೂವು ಏಕಲಿಂಗಿ ಅಥವಾ ದ್ವಿಲಿಂಗಿಯಾಗಿರಬಹುದು. ಹೂವಿನ ಪುಷ್ಪದಳಗಳು, ಶಲಾಕ ಮತ್ತು ಹೂವಿನ ತೊಟ್ಟಿನ ಆಧಾರದ ಮೇಲೆ ಸಸ್ಯದ ವರ್ಗೀಕರಣ ಮಾಡಬಹುದಾಗಿದೆ.

@KTBS NOT TO BE REPUBLISHED

**ಚಟುವಟಿಕೆ 1:**

ಈ ಮುಂದಿನ ಚಿತ್ರಗಳಲ್ಲಿ ಅಲೈಂಗಿಕ ರೀತಿಯ ಸಂತಾನೋತ್ಪತ್ತಿಯ ವಿಧವನ್ನು ಗುರುತಿಸಿ ಬರೆಯಿರಿ.

| ಚಿತ್ರಗಳು | ಸಸ್ಯ/ಪ್ರಾಣಿಯ ಹೆಸರು | ಅಲೈಂಗಿಕ ಸಂತಾನೋತ್ಪತ್ತಿಯ ವಿಧ |
|---|---|---|
|  | | |
|  | | |
|   | | |

| | | |
|---|---|---|
|  | | |
|  | | |
|  | | |
|  | | |
|  | | |

@KTBS NOT TO BE REPUBLISHED

ಮೇಲಿನ ಕೋಷ್ಠಕಕ್ಕೆ ಸಂಬಂಧಿಸಿದಂತೆ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಎಲೆಗಳಿಂದ ಉಂಟಾಗುವ ಅಲೈಂಗಿಕ ಸಂತಾನೋತ್ಪತ್ತಿಯ ವಿಧ ಮತ್ತು ಸಸ್ಯ ಯಾವುದು?

_______________________________________________

2. ಬಹು ವಿದಳನವನ್ನು ಉಂಟುಮಾಡುವ ಜೀವಿ ಯಾವುದು?

_______________________________________________

3. ಅಮೀಬದಲ್ಲಿ ನಡೆಯುವ ಅಲೈಂಗಿಕ ಸಂತಾನೋತ್ಪತ್ತಿ ಬಹುವಿದಳನ (ಸರಿ/ತಪ್ಪು)

_______________________________________________

4. ಮೇಲಿನ ಕೋಷ್ಠಕದಲ್ಲಿ ಮೊಗ್ಗುವಿಕೆಯಿಂದ ಉಂಟಾಗುವ ಜೀವಿಗಳು ಯಾವುವು?

_______________________________________________

_______________________________________________

**ಚಟುವಟಿಕೆ 2 :**

ಹೂವು ಸಸ್ಯದ ಸಂತಾನೋತ್ಪತ್ತಿ ಭಾಗವಾಗಿದ್ದು, ಮುಂದಿನ ಹೂವಿನ ಚಿತ್ರದಲ್ಲಿ ಖಾಲಿ ಇರುವ ಜಾಗದಲ್ಲಿ ಭಾಗಗಳನ್ನು ಗುರುತಿಸಿ.




1. ಸಸ್ಯದ ಸಂತಾನೋತ್ಪತ್ತಿ ಭಾಗ ಯಾವುದು?

________________________________________

2. ಸಂತಾನೋತ್ಪತ್ತಿ ಎಂದರೇನು? ವಿಧಗಳು ಯಾವುವು?

________________________________________

|---|---|
| ಪ್ರಯೋಗ ವಿಧಾನ | |

| | |
|---|---|
| ವೀಕ್ಷಣೆ | |
| ತೀರ್ಮಾನ | |

ಪ್ರಯೋಗದ ಚಿತ್ರ :

@KTBS
NOT TO BE REPUBLISHED

ನಿಮಗೆ ತಿಳಿದಿರಲಿ : ವಿಜ್ಞಾನ ಪ್ರಪಂಚದ ಮಹಾನ್ ಪ್ರತಿಭೆ ಬೆಂಜಮಿನ್ ಫ್ರಾಂಕ್ಲಿನ್

ಬೆಂಜಮಿನ್ ಫ್ರಾಂಕ್ಲಿನ್ (ಜನನ: ಜನವರಿ12, 1706 –ಮರಣ ಏಪ್ರಿಲ್ 12, 1790 )ಇವರು ಲೇಖಕರು, ಮಾನವ ಹಕ್ಕುಗಳ ಹೋರಾಟಗಾರರು , ವಿಜ್ಞಾನಿ, ಸಂಶೋಧಕರು , ರಾಯಭಾರಿಯೂ ಆಗಿದ್ದರು .ಅಮೇರಿಕ ಸಂಸ್ಥಾನದ ಬಾಸ್ಟನ್ ನಲ್ಲಿ ಜನನ.ಇವರು ವಿಜ್ಞಾನ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಸಂಬಂದಿತ ಸಂಸೋಧನೆ ಮತ್ತು ಭೌ–ತಶಾಸ್ತ್ರದ ಇತಿಹಾಸದ ಕೆಲಸಗಳಿಗೆ ಪ್ರಸಿದ್ದರಾಗಿದ್ದಾರೆ.1752ರಲ್ಲಿ ಗುಡುಗು , ಬಿರುಗಾಳಿಯ ಸಂದರ್ಭದಲ್ಲಿ ಆಕಾ–ಶದಲ್ಲಿ ಗಾಳಿಪಟ ಹಾರಿಸುವಾಗ ಮಿಂಚಿನಲ್ಲಿ ವಿದ್ಯುತ್ ಇದೆ ಎಂದು ಕಂಡುಕೊಂಡರು .ಈ ಘಟನೆ ಫ್ರಾಂಕ್ಲಿನ್ ಗೆ ಮಿಂಚುವಾಹಕಗಳನ್ನು ತಯಾರಿಸಲು ಪ್ರೇರಣೆಯಾಯಿತು .ಇದಲ್ಲದೆ ಸ್ಟೌವ್ , ಕನ್ನಡಕ ಮುಂತಾದುವುಗಳನ್ನು ನಿರ್ಮಿಸಿದರು .ವಾಯುಸಂಚಾರ ವ್ಯವಸ್ಥೆ ಸರಿ ಇಲ್ಲದ ಕೋಣೆಯಿದ್ದರೆ ಕಾಯಿಲೆ ಬಹುಬೇಗ ಹರಡುತ್ತದೆ ಎಂದು ತಿಳಿಸಿದರು .1753 ರಲ್ಲಿ ಅಮೇರಿಕದಲ್ಲಿ ಅನೇಕ ಮಿಂಚುವಾಹಕಗಳನ್ನು ತಯಾರಿಸಿ ಮುಖ್ಯ ಕಟ್ಟಡಗಳನ್ನು ರಕ್ಷಿ–ಸಲು ನೆರವಾದರು .ಅವುಗಳೆಂದರೆ ಎಡ್ ಸ್ಟೋನ್ ಲೈಟ್ ಹೌಸ್ , ಇಟಲಿಯ ಸಿಡಿಮದ್ದು ಭಂಡಾರ ಇತ್ಯಾದಿ . ಇವರು ಅಮೇರಿಕ ದೇಶದಲ್ಲಿಯೇ ಮೊತ್ತಮೊದಲ ಸಾರ್ವಜನಿಕ ಗ್ರಂಥಾಲಯ ಮತ್ತು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಿದರು .

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 12
## ವಿದ್ಯುತ್ ಸಾಮರ್ಥ್ಯದ ಮಾಪನ

B3I8V9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾಫಲ : ವಿದ್ಯಾರ್ಥಿಗಳು ವಿದ್ಯುತ್ ಸಾಮರ್ಥ್ಯವನ್ನು ಅಳೆಯುವ ಏಕಮಾನವನ್ನು ತಿಳಿಯುವರು ಮತ್ತು ವಿದ್ಯುತ್ಪ್ರವಾಹ ಮಾಪಕಗಳನ್ನು ಗುರುತಿಸುವರು.

**ಚಟುವಟಿಕೆ 1:**

ಕೆಲಸ ಮಾಡುವ ದರವನ್ನು ಸಾಮರ್ಥ್ಯ ಎನ್ನುತ್ತೇವೆ. ಒಂದು ವಿದ್ಯುತ್ ಮಂಡಲದಲ್ಲಿ ಬಳಕೆಯಾದ ಅಥವಾ ಕ್ಷೀಣಿಸಿದ ಶಕ್ತಿಯ ದರವನ್ನು ವಿದ್ಯುತ್ ಸಾಮರ್ಥ್ಯ ಎನ್ನುತ್ತಾರೆ. ಇದನ್ನು P=VI ಸೂತ್ರದಿಂದ ಸೂಚಿಸುತ್ತಾರೆ. ಇದರ SI ಏಕಮಾನ ವ್ಯಾಟ್ (W) ಆಗಿದೆ. ಅಂದರೆ 1 ವ್ಯಾಟ್ = 1 ವೋಲ್ಟ್ (V) X 1 ಆಂಪಿಯರ್ (A)

@KTBS NOT TO BE REPUBLISHED

1. ನೀವು ನೋಡಿರುವ ವಿದ್ಯುತ್ ಪ್ರವಾಹ ಮಾಪಕಗಳನ್ನು ಹೆಸರಿಸಿ.

2. ವಿಭವಾಂತರದ SI ಏಕಮಾನ ಯಾವುದು?

3. ವಿದ್ಯುತ್ ಪ್ರವಾಹದ SI ಏಕಮಾನ ಯಾವುದು?

4. ಶಕ್ತಿಯ SI ಏಕಮಾನ ಯಾವುದು?

5. ಒಂದು ಕಿಲೋ ವ್ಯಾಟ್ ಎಂಬುದು ಎಷ್ಟು ವ್ಯಾಟ್‌ಗಳಿಗೆ ಸಮನಾಗಿದೆ?

6. 1 ವ್ಯಾಟ್‌ನ ಅರ್ಥವನ್ನು ತಿಳಿಸಿ.

7. ವಿದ್ಯುತ್ ಸಾಮರ್ಥ್ಯದ ವ್ಯವಹಾರಿಕ ಏಕಮಾನ ಯಾವುದು?

**ಚಟುವಟಿಕೆ 2:**

ಈ ಚಿತ್ರಗಳನ್ನು ಗಮನಿಸಿ ಕೋಷ್ಟಕವನ್ನು ಪೂರ್ಣಗೊಳಿಸಿ.

| ಕ್ರ ಸಂ | ಚಿತ್ರ | ಹೆಸರು | ಈ ಸಾಧನವನ್ನು ಎಲ್ಲಿ ನೋಡಿರುವಿರಿ | ಇದರ ಉಪಯೋಗವೇನು? |
|---|---|---|---|---|
| 1 |   | | | |
| 2 |   | | | |
| 3 |  | | | |
| 4 |   | | | |
| 5 |  | | | |
| 6 |  | | | |
| 7 |   | | | |

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 13
## ಲೋಹ ಮತ್ತು ಅಲೋಹಗಳ ವರ್ಗೀಕರಣ

L6W2U3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ಲೋಹ ಮತ್ತು ಅಲೋಹಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸುವರು ಮತ್ತು ವಿದ್ಯುತ್ ವಾಹಕತೆಯನ್ನು ಪರೀಕ್ಷಿಸುವರು.

### ಚಟುವಟಿಕೆ 1 :

ವಿದ್ಯಾರ್ಥಿಗಳೇ, ನೀವು ಈ ಹಿಂದಿನ ತರಗತಿಯಲ್ಲಿ ಲೋಹ ಮತ್ತು ಅಲೋಹಗಳ ಭೌತ ಹಾಗೂ ರಾಸಾಯನಿಕ ಗುಣಲಕ್ಷಣಗಳನ್ನು ತಿಳಿದುಕೊಂಡಿದ್ದೀರಿ. ಕೊಟ್ಟಿರುವ ಗುಣಲಕ್ಷಣಗಳನ್ನು ನೋಡಿ ಅವುಗಳನ್ನು ಲೋಹ ಮತ್ತು ಅಲೋಹದ ಗುಣಲಕ್ಷಣಗಳಾಗಿ ವಿಂಗಡಿಸಿ.

1. ಉಷ್ಣವಾಹಕಗಳು 2. ತನ್ಯತೆ ಸ್ವಭಾವ ಇದೆ 3. ಕುಟ್ಯತೆ ಗುಣ ಇಲ್ಲ 4. ಇಲೆಕ್ಟ್ರಾನ್ ದಾನಿಗಳು 5. ಸಾರರಿಕ್ತ ಆಮ್ಲಗಳ ಜೊತೆ ವರ್ತಿಸುವುದಿಲ್ಲ 6. ಶಾಬ್ದನ ಗುಣ ಇಲ್ಲ 7. ನೀರಿನ ಜೊತೆ ವರ್ತಿಸಿ ಹೈಡ್ರೋಜನ್‌ಅನ್ನು ಬಿಡುಗಡೆ ಮಾಡುತ್ತವೆ. 8. ಇಲೆಕ್ಟ್ರಾನ್ ಸ್ವೀಕಾರಿಗಳು 9. ಆಮ್ಲೀಯ ಆಕ್ಸೈಡ್‌ಗಳು, 10. ಪ್ರತ್ಯಾಮ್ಲೀಯ ಆಕ್ಸೈಡ್‌ಗಳು, 11. ಧನ ಅಯಾನುಗಳು 12. ಹೊಳೆಯುವುದಿಲ್ಲ

@KTBS NOT TO BE REPUBLISHED

| ಲೋಹಗಳು | ಅಲೋಹಗಳು |
|---|---|
| | |

ಲೋಹಗಳನ್ನು ಅವುಗಳ ಕ್ರಿಯಾಶೀಲತೆಗೆ ಅನುಗುಣವಾಗಿ ಇಳಿಕೆ ಕ್ರಮದಲ್ಲಿ ಬರೆಯುವುದಕ್ಕೆ ಲೋಹಗಳ ಕ್ರಿಯಾಶೀಲ ಸರಣಿ ಎನ್ನುವರು. ಕೆಲವು ಲೋಹಗಳು ಹೆಚ್ಚಿನ ಕ್ರಿಯಾಶೀಲತೆ ಹೊಂದಿದ್ದರೆ, ಇನ್ನು ಕೆಲವು ಮಧ್ಯಮ ಹಾಗೂ ಇನ್ನು ಕೆಲವು ಕಡಿಮೆ ಕ್ರಿಯಾಶೀಲತೆ ಹೊಂದಿರುತ್ತವೆ.

### ಚಟುವಟಿಕೆ 2 :

ಇವುಗಳನ್ನು ಹೆಚ್ಚಿನ ಕ್ರಿಯಾಶೀಲ, ಮಧ್ಯಮ ಕ್ರಿಯಾಶೀಲ ಹಾಗೂ ಕಡಿಮೆ ಕ್ರಿಯಾಶೀಲ ಲೋಹಗಳಾಗಿ ವಿಂಗಡಿಸಿ.
ಪೊಟ್ಯಾಸಿಯಂ, ಸತು, ಕಬ್ಬಿಣ , ಕ್ಯಾಲ್ಸಿಯಂ, ಚಿನ್ನ, ಬೆಳ್ಳಿ

| ಹೆಚ್ಚಿನ ಕ್ರಿಯಾಶೀಲ | ಮಧ್ಯಮ ಕ್ರಿಯಾಶೀಲ | ಕಡಿಮೆ ಕ್ರಿಯಾಶೀಲ |
|---|---|---|
| | | |

**ಚಟುವಟಿಕೆ 3 :**

ಲೋಹ–ಅಲೋಹ ಹಾಗೂ ಆಮ್ಲ ಪ್ರತ್ಯಾಮ್ಲಗಳ ಗುಣಲಕ್ಷಣಗಳ ಬಗ್ಗೆ ತಿಳಿದುಕೊಂಡಿರುವುದರಿಂದ ಅದರ ಆಧಾರದ ಮೇಲೆ ಕೆಲವು ವಸ್ತು/ದ್ರಾವಣಗಳ ವಿದ್ಯುತ್‌ವಾಹಕತೆಯನ್ನು ಪರೀಕ್ಷಿಸಿ ಅವುಗಳನ್ನು ಉತ್ತಮ ವಾಹಕ ಮತ್ತು ದುರ್ಬಲ ವಾಹಕ ಎಂದು ವಿಂಗಡಿಸುವುದು.

**ವಿದ್ಯುತ್ ವಾಹಕತೆಯನ್ನು ಪರೀಕ್ಷಿಸುವುದು.**

ಈ ಮುಂದಿನ ವಸ್ತು/ದ್ರಾವಣಗಳನ್ನು ಉತ್ತಮ ವಾಹಕ ಮತ್ತು ದುರ್ಬಲ ವಾಹಕಗಳಾಗಿ ವಿಂಗಡಿಸಿ. ಸಕ್ಕರೆ ದ್ರಾವಣ, ಉಪ್ಪು, ಉಪ್ಪಿನ ದ್ರಾವಣ, ಕಬ್ಬಿಣದ ಮೊಳೆ, ಗ್ರ್ಯಾಫೈಟ್, ಅಸವಿತ ನೀರು, ಜೇನುತುಪ್ಪ, ನಿಂಬೆ ರಸ, ಹುಣಸೆ ರಸ, ತಾಮ್ರದ ತಂತಿ, ಒಣ ಮರದ ತುಂಡು, ಪ್ಲಾಸ್ಟಿಕ್.



@KTBS NOT TO BE REPUBLISHED

| ಉತ್ತಮ ವಾಹಕ | ದುರ್ಬಲ ವಾಹಕ |
|---|---|
| | |

- ವಾಹಕತೆಯನ್ನು ಪರೀಕ್ಷಿಸಲು ವಿದ್ಯುನ್ಮಂಡಲವು ಒಂದು ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ.

## ನಿಮಗಿದು ಗೊತ್ತೇ?

ಭೂಮಿಯ ಮೇಲೆ ಕಬ್ಬಿಣವು ಅತ್ಯಂತ ಹೇರಳವಾಗಿರುವ ಲೋಹವಾಗಿದೆ – ಮತ್ತು ಇದು ಭೂಮಿಯ ಮಧ್ಯಭಾಗದ ಬಹುಭಾಗವನ್ನು ಸಹ ಹೊಂದಿದೆ. ಆದಾಗ್ಯೂ, ಭೂಮಿಯ ಹೊರಪದರದಲ್ಲಿ ಕಂಡುಬರುವ ಅತ್ಯಂತ ಸಾಮಾನ್ಯ ಲೋಹವೆಂದರೆ ಅಲ್ಯೂಮಿನಿಯಂ.

ಮಧ್ಯಯುಗದವರೆಗೆ, ಕೇವಲ ಏಳು ತಿಳಿದಿರುವ ಲೋಹಗಳು ಇದ್ದವು: ಕಂಚು, ಕಬ್ಬಿಣ, ಚಿನ್ನ, ತಾಮ್ರ, ಬೆಳ್ಳಿ, ಸೀಸ ಮತ್ತು ಪಾದರಸ. ಉತ್ತರ ಅಮೆರಿಕಾದಲ್ಲಿ ಪ್ರತಿ ವರ್ಷ ಸುಮಾರು 69% ಉಕ್ಕಿನ – 80 ಮಿಲಿಯನ್ ಟನ್‌ಗಳಿಗಿಂತ ಹೆಚ್ಚು – ಮರುಬಳಕೆ ಮಾಡಲಾಗುತ್ತದೆ. ಅದು ಅಲ್ಯೂಮಿನಿಯಂ, ಕಾಗದ, ಪ್ಲಾಸ್ಟಿಕ್ ಮತ್ತು ಗಾಜು ಸೇರಿರುವುದಕ್ಕಿಂತ ಹೆಚ್ಚು.

1883 ರಲ್ಲಿ ಉಕ್ಕನ್ನು ಮೊದಲು ಗಗನಚುಂಬಿ ಕಟ್ಟಡಗಳಿಗೆ ಬಳಸಲಾಯಿತು. ಐಫೆಲ್ ಗೋಪುರವು ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಸುಮಾರು ಆರು ಇಂಚು ಎತ್ತರವಾಗಿರುತ್ತದೆ. ಏಕೆ? ಏಕೆಂದರೆ ಬಿಸಿ ಮಾಡಿದಾಗ ಉಕ್ಕು ಮತ್ತು ಕಬ್ಬಿಣ ವಿಸ್ತರಿಸುತ್ತದೆ.

ನೀರಿನ ಅಣುವು ಎರಡು ಲೋಹಗಳಲ್ಲದ, ಆಮ್ಲಜನಕ ಮತ್ತು ಹೈಡ್ರೋಜನ್ ನಿಂದ ಮಾಡಲ್ಪಟ್ಟಿದೆ.ಅನೇಕ ಅಲೋಹಗಳು ಅತಿ ಹೆಚ್ಚಿನ ಒತ್ತಡದಲ್ಲಿ ಲೋಹೀಯ ಗುಣಲಕ್ಷಣಗಳನ್ನು ಪಡೆಯಬಹುದು. ಸೆಲೆನಿಯಮ್ ತನ್ನ ಹೆಸರನ್ನು ಗ್ರೀಕ್ ಪದ "ಸೆಲೀನ್" ನಿಂದ ಪಡೆದುಕೊಂಡಿದೆ, ಇದರರ್ಥ "ಚಂದ್ರ". ಭೂಮಿಯ ಮೇಲಿನ ಜೀವಕ್ಕೆ ಕಾರ್ಬನ್ ಏಕೈಕ ಪ್ರಮುಖ ಅಂಶವಾಗಿದೆ. ಫ್ಲೋರಿನ್ ಆಕ್ಸೈಡ್ ಅನ್ನು ಹೊಂದಿರುವುದಿಲ್ಲ. ಭೂಮಿಯ ಮೇಲಿನ ಸಾರಜನಕ ಸ್ಥಿರೀಕರಣದ 8% ಗೆ ಮಿಂಚು ಕಾರಣವಾಗಿದೆ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 14
## ಲೋಹಗಳ ರಾಸಾಯನಿಕ ವರ್ತನೆಗಳು

Q9Q5P2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಲೋಹಗಳು ಗಾಳಿ, ನೀರು, ಮತ್ತು ಸಾರರಿಕ್ತ ಆಮ್ಲಗಳ ಜೊತೆ ವರ್ತಿಸುವುದರ ರಾಸಾಯನಿಕ ಸಮೀಕರಣ ಬರೆದು ಸರಿದೂಗಿಸುವರು.**

ಲೋಹಗಳು ಕ್ರಿಯಾಶೀಲ ಧಾತುವಾಗಿರುವುದರಿಂದ ಗಾಳಿ, ನೀರು ಮತ್ತು ಸಾರರಿಕ್ತ ಆಮ್ಲಗಳೊಡನೆ ವರ್ತಿಸುತ್ತವೆ. ಗಾಳಿಯ ಜೊತೆ ವರ್ತಿಸಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾದರೆ, ನೀರು ಮತ್ತು ಸಾರರಿಕ್ತ ಆಮ್ಲಗಳ ಜೊತೆ ವರ್ತಿಸಿದಾಗ ಹೈಡ್ರೋಜನ್ ಅನಿಲವನ್ನು ಬಿಡುಗಡೆ ಮಾಡುತ್ತವೆ.

**ಚಟುವಟಿಕೆ 1 :**

ಶಿಕ್ಷಕರ ಸಹಾಯದಿಂದ ಮೆಗ್ನೀಸಿಯಂ ತಂತಿ ಉರಿಸುವುದರ ಪ್ರಯೋಗ ಮಾಡಿ. ಬದಲಾವಣೆಗಳನ್ನು ಪಟ್ಟಿ ಮಾಡಿ ಕಾರಣ ತಿಳಿಯಿರಿ. ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.

@KTBS NOT TO BE REPUBLISHED

**ಚಟುವಟಿಕೆ 2 :**

ಬಿಟ್ಟ ಸ್ಥಳಗಳಲ್ಲಿ ಸೂಕ್ತ ಉದಾಹರಣೆ ಬರೆಯಿರಿ.




**ಚಟುವಟಿಕೆ 3 :**

**ಪ್ರಯೋಗದ ಮೂಲಕ ಸ್ಥಾನಪಲ್ಲಟ ಕ್ರಿಯೆಯನ್ನು ತಿಳಿಯುವರು.**

**ಬೇಕಾಗುವ ಸಾಮಗ್ರಿಗಳು:** 2 ಪ್ರನಾಳಗಳು, ಹೊಸ ಕಬ್ಬಿಣದ ಮೊಳೆ, ತಾಮ್ರದ ಸಲ್ಫೇಟ್ ದ್ರಾವಣ, ತಾಮ್ರದ ತಂತಿ, ಕಾರ್ಕ್, ದಾರ, ಕಬ್ಬಿಣದ ಸಲ್ಫೇಟ್ ದ್ರಾವಣ.

**ವಿಧಾನ :** ಎರಡು ಪ್ರನಾಳಗಳನ್ನು ತೆಗೆದುಕೊಳ್ಳಿ ಒಂದರಲ್ಲಿ ತಾಮ್ರದ ಸಲ್ಫೇಟ್ ದ್ರಾವಣವನ್ನು, ಇನ್ನೊಂದರಲ್ಲಿ ಕಬ್ಬಿಣದ ಸಲ್ಫೇಟ್ ದ್ರಾವಣವನ್ನು ತೆಗೆದುಕೊಳ್ಳಿ. ಚಿತ್ರದಲ್ಲಿ ತೋರಿಸಿರುವಂತೆ ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಕಬ್ಬಿಣದ ಮೊಳೆಯನ್ನು, ಕಬ್ಬಿಣದ ಸಲ್ಫೇಟ್ ದ್ರಾವಣದಲ್ಲಿ ತಾಮ್ರದ ತಂತಿಯನ್ನು ದಾರದ ಸಹಾಯದಿಂದ ಇಡಿ. ಐದು ನಿಮಿಷಗಳ ನಂತರ ವೀಕ್ಷಿಸಿ ಫಲಿತಾಂಶ ದಾಖಲಿಸಿ. ವ್ಯತ್ಯಾಸಕ್ಕೆ ಶಿಕ್ಷಕರ ಸಹಾಯದಿಂದ ಕಾರಣ ತಿಳಿಯಿರಿ. ಇದು ಸೂಚಿಸುವ ರಾಸಾಯನಿಕ ಕ್ರಿಯೆಯನ್ನು ಬರೆಯಿರಿ.




ಫಲಿತಾಂಶ: ____________________________________________

____________________________________________

1. ರಾಸಾಯನಿಕ ಸಮೀಕರಣ:

____________________________________________

NOT TO BE REPUBLISHED ©KTBS

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 15

## ಲೋಹಗಳು ಮತ್ತು ಅಲೋಹಗಳ ನಶಿಸುವಿಕೆ

J1R1J6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಚಟುವಟಿಕೆ 1:**

**ಕಲಿಕಾಫಲ : ವಿದ್ಯಾರ್ಥಿಗಳು ನಶಿಸುವಿಕೆಗೆ ಕಾರಣ ಹಾಗೂ ಅದನ್ನು ತಡೆಗಟ್ಟುವ ವಿಧಾನಗಳನ್ನು ಅರ್ಥೈಸಿಕೊಳ್ಳುವರು.**

ಲೋಹಗಳು ಕ್ರಿಯಾಶೀಲ ಧಾತುಗಳು. ಹಾಗಾಗಿ ಹೆಚ್ಚಿನ ಲೋಹಗಳು ಸಂಯುಕ್ತರೂಪದಲ್ಲಿ ಅಂದರೆ ಅದಿರುಗಳ ರೂಪದಲ್ಲಿ ದೊರೆಯುತ್ತವೆ. ಚಿನ್ನ, ಬೆಳ್ಳಿ ಮತ್ತು ಪ್ಲಾಟಿನಂನಂತಹ ಕೆಲವು ಲೋಹಗಳು ಮಾತ್ರ ಅತಿ ಕಡಿಮೆ ಕ್ರಿಯಾಶೀಲತೆ ಹೊಂದಿರುವುದರಿಂದ ಮುಕ್ತ ರೂಪದಲ್ಲಿ ದೊರೆಯುತ್ತವೆ. ಲೋಹಗಳನ್ನು ಗಾಳಿಗೆ ತೆರೆದಿಟ್ಟಾಗ ಆಕ್ಸಿಜನ್, ಕಾರ್ಬನ್ ಡೈಆಕ್ಸೈಡ್, ಸಲ್ಫರ್ ಗಳಿಂದ ತಮ್ಮ ಹೊಳಪನ್ನು ಕಳೆದುಕೊಳ್ಳುತ್ತವೆ.

ಮುಂದಿನ ವಸ್ತುಗಳನ್ನು ಗಾಳಿಗೆ ತೆರೆದಿಟ್ಟಾಗ ಆಗುವ ಬದಲಾವಣೆಗಳನ್ನು ಬರೆಯಿರಿ.

| ವಸ್ತುಗಳು | ಬದಲಾವಣೆ |
|---|---|
| ಕಿಟಕಿಯ ಸರಳುಗಳು | |
| ಅಲ್ಯುಮಿನಿಯಂ ಪಾತ್ರೆ | |
| ತಾಮ್ರದ ಲೋಟ | |
| ಬೆಳ್ಳಿಯ ಗೆಜ್ಜೆ | |
| ಚಿನ್ನದ ಬಳೆ | |

@KTBS NOT TO BE REPUBLISHED

**ಚಟುವಟಿಕೆ 2 :** ನೀವು ಕಬ್ಬಿಣದ ಗೇಟ್, ಲೋಹದ ಕಂಬ ಇತ್ಯಾದಿಗಳನ್ನು ಕೆಲಕಾಲ ಗಾಳಿ, ಮಳೆಗೆ ತೆರೆದಿಟ್ಟರೆ ಕ್ರಮೇಣವಾಗಿ ಹೊಳಪನ್ನು ಕಳೆದುಕೊಳ್ಳುವುದನ್ನು ನೀವು ಗಮನಿಸಿರುವಿರಿ. ಅವು ಹೊಳಪು ಕಳೆದುಕೊಳ್ಳಲು ಕಾರಣವೇನು? ಅದು ಹೊಳಪು ಕಳೆದುಕೊಳ್ಳದಂತೆ ತಡೆಗಟ್ಟುವ ವಿಧಾನಗಳನ್ನು ತಿಳಿಸಿ.

ಕಾರಣ : ..........................................................................................................

..........................................................................................................

**ತಡೆಗಟ್ಟುವ ವಿಧಾನಗಳು :** ..........................................................................................

..........................................................................................................

..........................................................................................................

..........................................................................................................

..........................................................................................................

## ನಿಮಗಿದು ತಿಳಿದಿರಲಿ

## ಒಂದು ಲೋಹ– ಕರ್ನಾಟಕದ ಸುವರ್ಣ ಪರಂಪರೆ

ಭಾರತೀಯರಿಗೆ ಚಿನ್ನವು ಹೊಂದಿರುವ ಆಕರ್ಷಣೆಯು ಗೀಳಿನ ಗಡಿಯಲ್ಲಿದೆ. ಭಾರತವು ವರ್ಷಕ್ಕೆ ಎರಡು ಟನ್ ಚಿನ್ನವನ್ನು ಉತ್ಪಾದಿಸುತ್ತಿದ್ದರೂ, ಬಳಕೆ ಸುಮಾರು 500 ಟನ್‌ಗಳಷ್ಟಿದ್ದು, ಜಾಗತಿಕ ಉತ್ಪಾದನೆಯ ಸುಮಾರು 20% ರಷ್ಟಿದೆ. ಭಾರತವು ತನ್ನ ಜನಸಂಖ್ಯೆಗೆ ಅನುಗುಣವಾಗಿ ಬಳಸುವ ಏಕೈಕ ಲೋಹ ಇದಾಗಿದೆ. ಚಿನ್ನದ ಬಗ್ಗೆ ಆರಂಭಿಕ ಉಲ್ಲೇಖವು ಋಗ್ವೇದ ಸಂಹಿತದಲ್ಲಿ ಕಂಡುಬರುತ್ತದೆ. ಎಲ್ಲಾ ಯಜ್ಞ ವಿಧಿಗಳಲ್ಲಿ ಚಿನ್ನದ ಪಾತ್ರೆಗಳನ್ನು ಬಳಸಲಾಗುತ್ತಿತ್ತು. ಅರ್ಥಶಾಸ್ತ್ರವು ಚಿನ್ನವು "ಕಮಲದ ಬಣ್ಣ, ಮೃದು, ಹೊಳಪುಳ್ಳ ಮತ್ತು ಯಾವುದೇ ರೀತಿಯ ಶಬ್ದವನ್ನು ಉತ್ಪಾದಿಸದ" ಚಿನ್ನವನ್ನು ಹೊಂದಿದೆ ಎಂದು ಉಲ್ಲೇಖಿಸುತ್ತದೆ. ಹರಪ್ಪ ನಾಗರಿಕತೆಯು ಅನೇಕ ಚಿನ್ನದ ವಸ್ತುಗಳನ್ನು ಹೊಂದಿತ್ತು. ಈ ಚಿನ್ನವು ಕರ್ನಾಟಕದ ಕೋಲಾರದಲ್ಲಿ ಹುಟ್ಟಿಕೊಂಡಿರಬಹುದು ಎಂದು ಸೂಚಿಸುತ್ತದೆ.. ರಾಮಾಯಣ ಮಹಾಕಾವ್ಯದಲ್ಲಿ, ಚಿನ್ನದ ಜಿಂಕೆ, ಅದು ಭ್ರಮೆಯಾಗಿದ್ದರೂ, ಸೀತೆಯನ್ನು ಬೇರೆಡೆಗೆ ಸೆಳೆಯಲು ಮತ್ತು ರಾಮಾಯಣದ ಕಥೆಗೆ ಅದೃಷ್ಟದ ತಿರುವನ್ನು ನೀಡಲು ಸಾಕಾಗಿತ್ತು. ದೂರದ ಗತಕಾಲದಲ್ಲಿ ದಕ್ಷಿಣ ಏಷ್ಯಾದ ಪ್ರದೇಶಗಳನ್ನು ಭಾರತ ವಶಪಡಿಸಿಕೊಂಡಿದ್ದು ಚಿನ್ನದ ಬಯಕೆಯಿಂದ ಎಂದು ಹೇಳಲಾಗಿದೆ. ಚಿನ್ನವನ್ನು ಗಣಿಗಾರಿಕೆ ಮಾಡುವ ಸಂಪ್ರದಾಯವು ಕನಿಷ್ಠ ಮೊದಲ ಸಹಸ್ರಮಾನದ BC ಯಲ್ಲಿ ಪ್ರಾರಂಭವಾಯಿತು. ಕೋಲಾರದ ಚಿನ್ನದ ಗಣಿಗಳಲ್ಲಿನ ಚಾಂಪಿಯನ್ ರೀಫ್ ಅನ್ನು ಗುಪ್ತರ ಅವಧಿಯಲ್ಲಿ ಕ್ರಿ.ಶ. ಐದನೇ ಶತಮಾನದಲ್ಲಿ 50 ಮೀ ಆಳಕ್ಕೆ ಗಣಿಗಾರಿಕೆ ಮಾಡಲಾಯಿತು. ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳು ನಿರಂತರ, ಸ್ವಲ್ಪ–ಮಟ್ಟಿಗೆ ಪರಿಶೀಲಿಸಲ್ಪಟ್ಟಿದ್ದರೂ, ಅಭಿವೃದ್ಧಿಯಲ್ಲಿವೆ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 16
## ಅಂಡಜ, ಜರಾಯುಜ ಮತ್ತು ರೂಪಪರಿವರ್ತನೆ

V5N4L8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಅಂಡಜ, ಜರಾಯುಜ ಮತ್ತು ರೂಪಪರಿವರ್ತನೆಯನ್ನು ವಿವರಿಸುವರು.**

ನಮ್ಮ ಭೂಮಿಯ ಮೇಲೆ ಜೀವಿಗಳು ಸಂತಾನೋತ್ಪತ್ತಿಯ ಮುಖಾಂತರ ಪೀಳಿಗೆಯನ್ನು ಮುಂದುವರೆಸುತ್ತವೆ. ವಿವಿಧ ಪ್ರಾಣಿಗಳು ಮರಿಯನ್ನು ಹಾಕುವುದರ ಮುಖಾಂತರ ಸಂತಾನೋತ್ಪತ್ತಿ ನಡೆಸುತ್ತವೆ. ಅವುಗಳನ್ನು ಜರಾಯುಜಗಳೆಂದು ಕರೆಯುತ್ತಾರೆ. ಕೆಲವು ಪ್ರಾಣಿಗಳು ಮೊಟ್ಟೆ ಇಡುವುದರ ಮುಖಾಂತರ ಸಂತಾನೋತ್ಪತ್ತಿ ಮುಂದುವರೆಸುತ್ತವೆ ಅವುಗಳನ್ನು ಅಂಡಜಗಳು ಎಂದು ಕರೆಯಲಾಗುತ್ತದೆ. ಕೆಲವು ಪ್ರಾಣಿಗಳು ಪ್ರೌಢಾವಸ್ಥೆಯನ್ನು ತಲುಪಲು ವಿವಿಧ ಹಂತವನ್ನು ತಲುಪಿ ಪ್ರೌಢಜೀವಿಯಾಗುತ್ತವೆ. ಈ ಪ್ರಕ್ರಿಯೆಯನ್ನು ರೂಪ ಪರಿವರ್ತನೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಎಲ್ಲಾ ಜೀವಿಗಳು ಪ್ರಾಥಮಿಕ ಹಂತದಿಂದ ಪ್ರೌಢಾವಸ್ಥೆಯನ್ನು ತಲುಪಲು ಬೆಳವಣಿಗೆ ಮುಂದುವರೆಸಿಕೊಂಡು ಬಂದಿದೆ. ಆಗತಾನೆ ಜನಿಸಿದ ಇಲ್ಲವೇ ಮೊಟ್ಟೆ ಒಡೆದು ಬಂದ ಹೊಸ ಮರಿಯು ಪ್ರೌಢಾವಸ್ಥೆ ತಲುಪುವವರೆಗೆ ವಿವಿಧ ಹಂತಗಳನ್ನು ನಾವು ಗಮನಿಸಬಹುದು. ಪ್ರೌಢಾವಸ್ಥೆ ತಲುಪುವ ಲಾರ್ವಾಗಳ ರೂಪಾಂತರವನ್ನು ರೂಪ ಪರಿವರ್ತನೆ ಎಂದು ಕರೆಯುತ್ತಾರೆ.

**ಚಟುವಟಿಕೆ 1:**

ಮುಂದಿನ ಕೋಷ್ಟಕದಲ್ಲಿ ಕೆಲವು ಪ್ರಾಣಿಗಳ ಉದಾಹರಣೆ ನೀಡಲಾಗಿದೆ. ಅವುಗಳಲ್ಲಿ ಅಂಡಜ ಮತ್ತು ಜರಾಯು– ಜಗಳು ಯಾವುದೆಂದು ಗುರುತಿಸಿ ಬರೆಯಿರಿ.

| ಕ್ರಮ ಸಂಖ್ಯೆ | ಪ್ರಾಣಿಯ ಹೆಸರು | ಅಂಡಜ | ಜರಾಯುಜ | ಪ್ರಾಣಿಯ ಮರಿ |
|---|---|---|---|---|
| 1 | ಕಪ್ಪೆ | | | |
| 2 | ಬೆಕ್ಕು | | | |
| 3 | ನಾಯಿ | | | |
| 4 | ಕೋಳಿ | | | ಕೋಳಿ ಮರಿ |
| 5 | ಹಸು | | | ಕರು |
| 6 | ಮಾನವ | | | ಮಗು |
| 7 | ಒಂಟೆ | | | |
| 8 | ಎಮ್ಮೆ | | | |
| 9 | ಮೊಸಳೆ | ಅಂಡಜ | | |

@KTBS NOT TO BE REPUBLISHED

| | | | | |
|---|---|---|---|---|
| 10 | ಪ್ಲಾಟಿಪಸ್ | | | |
| 11 | ಎಕಿಡ್ನಾ | | | |
| 12 | ಹಾವು | | | ಹಾವಿನ ಮರಿ |
| 13 | ಗಿಳಿ | | | |

ಮೇಲಿನ ಕೋಷ್ಠಕಕ್ಕೆ ಸಂಬಂಧಿಸಿದಂತೆ ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಮೇಲಿನ ಜೀವಿಗಳಲ್ಲಿ ಬಾಹ್ಯ ನಿಶೇಚನ ಹೊಂದುವ ಮೊಟ್ಟೆ ಇಡುವ ಜೀವಿಗಳು ಯಾವುವು?

______________________________________________

______________________________________________

2. ಮೇಲಿನ ಜೀವಿಗಳಲ್ಲಿ ಆಂತರಿಕ ನಿಶೇಚನ ಹೊಂದುವ ಜೀವಿಗಳು ಯಾವುವು?

______________________________________________

______________________________________________

3. ಮೇಲಿನ ಕೋಷ್ಠಕದಲ್ಲಿನ ಮೊಟ್ಟೆ ಇಡುವ ಸಸ್ತನಿಗಳು ಯಾವುವು?

______________________________________________

______________________________________________

@KTBS NOT TO BE REPUBLISHED

**ಚಟುವಟಿಕೆ 2:**

ಉದಾಃ ರೇಷ್ಮೆ ಹುಳು(ಮೊಟ್ಟೆ–ಲಾರ್ವಾ(ಕಂಬಳಿಹುಳು)–ಪ್ಯೂಪ–ಪ್ರೌಢಕೀಟ) ಹಾಗೆಯೇ ಮುಂದಿನ ಚಿತ್ರದಲ್ಲಿ ಕಪ್ಪೆಯ ರೂಪಪರಿವರ್ತನೆ ಬಗ್ಗೆ ನೀಡಲಾಗಿದೆ.ವಿವಿಧ ಹಂತಗಳನ್ನು ಗುರುತಿಸಿ. ಖಾಲಿ ಇರುವ ಸ್ಥಳವನ್ನು ಭರ್ತಿ ಮಾಡಿ ಬರೆಯಿರಿ.





ಮೇಲಿನ ಚಿತ್ರಕ್ಕೆ ಸಂಬಂಧಿಸಿದಂತೆ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ರೂಪಪರಿವರ್ತನೆ ಎಂದರೇನು? ಉದಾಃ ಕೊಡಿ.

______________________________

______________________________

______________________________

2. ಬಾಹ್ಯ ನಿಶೇಚನ ಎಂದರೇನು? ಉದಾಃ ಕೊಡಿ.

______________________________

______________________________

______________________________

3. ಆಂತರಿಕ ನಿಶೇಚನ ಎಂದರೇನು?ಉದಾಃ ಕೊಡಿ.

______________________________

______________________________

______________________________

4. ಮಾನವರು ರೂಪಪರಿವರ್ತನೆಗೊಳ್ಳದೇ ಇರಲು ಕಾರಣವೇನು?

______________________________

______________________________

5. ರೂಪಪರಿವರ್ತನೆಗೊಳ್ಳುವ ಜೀವಿಗಳನ್ನು ಪಟ್ಟಿ ಮಾಡಿ.

______________________________

______________________________

ವೀಡಿಯೋ ಪಾಠ : https://youtu.be/ILPDmUGCN64?si=IEp8yuGaIgQNUhYp

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ–17
# ಮಾನವನಲ್ಲಿ ಸಂತಾನೋತ್ಪತ್ತಿ

B1F6H3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ಮಾನವನ ಲೈಂಗಿಕ ರೀತಿಯ ಸಂತಾನೋತ್ಪತ್ತಿಯಲ್ಲಿ ಗಂಡು ಮತ್ತು ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ರಚನೆ ಮತ್ತು ಕಾರ್ಯಗಳನ್ನು ವಿವರಿಸುವರು.

ವಿಭಿನ್ನ ಪ್ರಭೇದಗಳು ಸಂತಾನೋತ್ಪತ್ತಿಗೆ ಬಳಸುವ ವಿವಿಧ ವಿಧಾನಗಳನ್ನು ಚರ್ಚಿಸಿದ್ದೇವೆ. ಮನುಷ್ಯರಲ್ಲಿ ಲೈಂಗಿಕ ರೀತಿಯ ಸಂತಾನೋತ್ಪತ್ತಿ ನಡೆಯುತ್ತದೆ. ಅದು ಗಂಡು ಸಂತಾನೋತ್ಪತ್ತಿ ಮತ್ತು ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಮುಖಾಂತರ ನಡೆಯುತ್ತದೆ.

**ಚಟುವಟಿಕೆ 1:**

ಈ ಮುಂದಿನ ಚಿತ್ರವನ್ನು ಗಮನಿಸಿ ಭಾಗಗಳನ್ನು ಗುರುತಿಸಿ.ಹಾಗೂ ಅವುಗಳ ಕಾರ್ಯವನ್ನು ಚರ್ಚಿಸಿ ಕೋಷ್ಟಕದಲ್ಲಿ ಬರೆಯಿರಿ.



@KTBS NOT TO BE REPUBLISHED

| ಕ್ರಮ ಸಂಖ್ಯೆ | ಗಂಡು ಸಂತಾನೋತ್ಪತ್ತಿ ವ್ಯೂಹದ ಭಾಗಗಳು | ಕಾರ್ಯಗಳು |
|---|---|---|
| 1 | ವೀರ್ಯನಾಳ | |
| 2 | ಪ್ರೋಸ್ಟೇಟ್ ಗ್ರಂಥಿ | |
| 3 | ವೀರ್ಯ ಕೋಶಿಕೆ | |
| 4 | ಶಿಶ್ನ | |
| 5 | ವೃಷಣ | |

ಕೋಷ್ಠಕಕ್ಕೆ ಸಂಬಂಧಿಸಿದಂತೆ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ವೃಷಣಗಳು ಸ್ರವಿಸುವ ಹಾರ್ಮೋನು ಯಾವುದು? ಉಪಯೋಗವೇನು?

2. ವೀರ್ಯಾಣುವಿನ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

@KTBS
NOT TO BE REPUBLISHED

ಚಟುವಟಿಕೆ 2 :ಹೆಣ್ಣು ಸಂತಾನೋತ್ಪತ್ತಿ ವ್ಯೂಹದಲ್ಲಿನ ಬಿಟ್ಟ ಸ್ಥಳದಲ್ಲಿನ ಭಾಗಗಳನ್ನು ಗುರುತಿಸಿ. ಮುಂದಿನ ಕೋಷ್ಟಕವನ್ನು ಭರ್ತಿ ಮಾಡಿರಿ.



| ಕ್ರಮ ಸಂಖ್ಯೆ | ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗಗಳು | ಕಾರ್ಯಗಳು |
|---|---|---|
| 1 | ಅಂಡ | |
| 2 | ಗರ್ಭಕೋಶ | |
| 3 | ಫೆಲೋಪಿಯನ್ ನಾಳ | |
| 4 | ಅಂಡಾಶಯ | |
| 5 | ಯೋನಿ | |

@KTBS NOT TO BE REPUBLISHED

ಮೇಲಿನ ಕೋಷ್ಟಕಕ್ಕೆ ಸಂಬಂಧಿಸಿದಂತೆ ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ?

______________________________

______________________________

2. ಋತುಚಕ್ರ ಎಂದರೇನು?

______________________________

______________________________

3. ಅಂಡಾಶಯದಲ್ಲಿ ಒಂದು ಋತುಚಕ್ರದ ಅವಧಿಯಲ್ಲಿ ಸಾಮಾನ್ಯವಾಗಿ ಎಷ್ಟು ಅಂಡಗಳು ಉತ್ಪತ್ತಿಯಾಗುತ್ತದೆ?

______________________________

______________________________

ವೀಡಿಯೋ ಪಾಠ : https://youtu.be/r8loV0y4htU?si=GdhYxnF7uK4sO0EN

## ನಿಮಗಿದು ಗೊತ್ತೆ?

### ಪ್ರಣಾಳ ಶಿಶು

ಪ್ರಣಾಳ ಶಿಶು : ಇನ್ ವಿಟ್ರೊ ಫಲೀಕರಣ (IVF), ಎಂಬುದು ಫಲೀಕರಣದ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಅಂಡವನ್ನು ಪ್ರನಾಳದಲ್ಲಿ ("ಇನ್ ಗ್ಲಾಸ್") ವೀರ್ಯದೊಂದಿಗೆ ಸಂಯೋಜಿಸಲಾಗುತ್ತದೆ. ಈ ಪ್ರಕ್ರಿಯೆಯು ಅಂಡೋತ್ಪತ್ತಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಉತ್ತೇಜಿಸುವುದು, ನಂತರ ಅಂಡಾಶಯದಿಂದ ಅಂಡಾಣುವನ್ನು (ಮೊಟ್ಟೆ ಅಥವಾ ಮೊಟ್ಟೆಗಳು) ಹೊರ ತೆಗೆದು, ಪ್ರಯೋಗಾಲಯದಲ್ಲಿ ಅವಶ್ಯ ಬೆಳವಣಿಗೆ ಮಾಧ್ಯಮದಲ್ಲಿ ವೀರ್ಯವನ್ನು ಫಲವತ್ತಾಗಿಸಲು ಅನುವು ಮಾಡಿಕೊಡುತ್ತದೆ. ಫಲವತ್ತಾದ ಅಂಡವು (ಜೈಗೋಟ್) 2–6 ದಿನಗಳವರೆಗೆ ಭ್ರೂಣ ಬೆಳವಣಿಗೆಗೆ ಒಳಗಾದ ನಂತರ, ಯಶಸ್ವಿ ಗರ್ಭಧಾರಣೆಯನ್ನು ಸ್ಥಾಪಿಸುವ ಉದ್ದೇಶದಿಂದ ಅದನ್ನು ಕ್ಯಾತಿಟರ್ ಉಪಕರಣದ ಮೂಲಕ ಗರ್ಭಾಶ–ಯಕ್ಕೆ ವರ್ಗಾಯಿಸಲಾಗುತ್ತದೆ.

ಜುಲೈ 1978 ರಲ್ಲಿ, ಲೂಯಿಸ್ ಬ್ರೌನ್ ತನ್ನ ತಾಯಿ IVF ಚಿಕಿತ್ಸೆಯನ್ನು ಪಡೆದ ನಂತರ ಯಶಸ್ವಿಯಾಗಿ ಜನಿಸಿದ ಮೊದಲ ಮಗು " ಬ್ರೌನ್ " ನೈಸರ್ಗಿಕ–ಚಕ್ರ IVF ಪರಿಣಾಮವಾಗಿ ಜನಿಸಿದರು, ಅಲ್ಲಿ ಯಾವುದೇ ಪ್ರಚೋದನೆಯನ್ನು ಮಾಡಲಾಗಿಲ್ಲ. ಈ ಪ್ರಕ್ರಿಯೆಯು ಇಂಗ್ಲೆಂಡ್‌ನ ಓಲ್ಡ್‌ಹ್ಯಾಮ್‌ನ ರಾಯ್ಟನ್‌ನಲ್ಲಿರುವ ಡಾ. ಕೆರ್ಶಾಸ್ ಕಾಟೇಜ್ ಆಸ್ಪತ್ರೆಯಲ್ಲಿ ನಡೆಯಿತು.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 18

# ದರ್ಪಣ ಮತ್ತು ಮಸೂರದ ವಿಧಗಳು

KZJ6PZ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಬೆಳಕಿನ ಪ್ರತಿಫಲನದ ನಿಯಮ, ಮಸೂರ ಮತ್ತು ದರ್ಪಣದ ವಿಧಗಳನ್ನು ತಿಳಿಯುವರು.**

ವಿದ್ಯಾರ್ಥಿಗಳೇ ಹಿಂದಿನ ತರಗತಿಗಳಲ್ಲಿ ನೀವು ಈಗಾಗಲೇ ಬೆಳಕಿನ ಬಗ್ಗೆ ಅನೇಕ ಮಾಹಿತಿಗಳನ್ನು ತಿಳಿದಿದ್ದೀರಿ. ಹೊಳೆಯುವ ಮೇಲ್ಮೈಗಳು ಕನ್ನಡಿಯಂತೆ ವರ್ತಿಸುತ್ತವೆ. ಕನ್ನಡಿಯು ಅದರ ಮೇಲೆ ಬಿದ್ದ ಬೆಳಕಿನ ದಿಕ್ಕನ್ನು ಬದಲಾಯಿಸು–ತ್ತದೆ. ಯಾವುದೇ ಸಮತಲದ ಮೇಲೆ ಬೀಳುವ ಕಿರಣಗಳನ್ನು ಪತನ ಕಿರಣ ಎನ್ನುವರು. ಪ್ರತಿಫಲಿಸಿದ ನಂತರ ಸಮತಲದಿಂದ ಹಿಂದಕ್ಕೆ ಬರುವ ಕಿರಣವನ್ನು ಪ್ರತಿಫಲಿತ ಕಿರಣ ಎಂದು ಕರೆಯುತ್ತಾರೆ. ಪತನ ಕಿರಣ ಪ್ರತಿಫಲಿತ ಕಿರಣಕ್ಕೆ ಸಮನಾಗಿ–ರುತ್ತದೆ. ಪತನ ಕೋನ ಮತ್ತು ಪ್ರತಿಫಲಿತ ಕೋನ ಮತ್ತು ಎಳೆದ ಲಂಬ ಮೂರೂ ಒಂದೇ ಸಮತಲದಲ್ಲಿರುತ್ತದೆ. ಇದೇ ಬೆಳಕಿನ ಪ್ರತಿಫಲನ ನಿಯಮವಾಗಿದೆ. ದರ್ಪಣಗಳು ಬೆಳಕನ್ನು ಪ್ರತಿಫಲಿಸುತ್ತವೆ. ದರ್ಪಣಗಳಲ್ಲಿ ಎರಡು ವಿಧ. ಪೀನ ಮತ್ತು ನಿಮ್ನದರ್ಪಣ. ಗೋಲೀಯ ದರ್ಪಣದ ಹೊಳಪುಳ್ಳ ಮೇಲ್ಮೈ ಒಳಬಾಗಿದ್ದರೆ ಅದು ನಿಮ್ನ ದರ್ಪಣ. ಗೋಲೀಯ ದರ್ಪ–ಣದ ಹೊಳಪುಳ್ಳ ಮೇಲ್ಮೈ ಹೊರಬಾಗಿದ್ದರೆ ಅದು ಪೀನದರ್ಪಣ. ಮಸೂರಗಳು ಬೆಳಕನ್ನು ಪ್ರತಿಫಲಿಸುತ್ತವೆ. ಅಂಚಿಗಿಂತ ಮಧ್ಯದಲ್ಲಿ ದಪ್ಪವಾಗಿರುವ ಮಸೂರಗಳು ಪೀನ ಮಸೂರಗಳು. ಮಧ್ಯದಲ್ಲಿ ತೆಳುವಾಗಿದ್ದು ಅಂಚಿನಲ್ಲಿ ದಪ್ಪವಾಗಿರುವ ಮಸೂರಗಳು ನಿಮ್ನ ಮಸೂರಗಳು.

**ಚಟುವಟಿಕೆ 1 :**

ಈ ಕೆಳಗಿನ ಪ್ರತಿಫಲನದ ನಿಯಮಕ್ಕೆ ಸಂಬಂಧಿಸಿದಂತಹ ಚಿತ್ರವನ್ನು ವೀಕ್ಷಿಸಿ, ಸರಿಯಾದ ಉತ್ತರವನ್ನು ಕೋಷ್ಠ–ಕದಲ್ಲಿ ನಮೂದಿಸಿ.




NOT TO BE REPUBLISHED @KTBS

ಪತನ ಕೋನ ಮತ್ತು ಪ್ರತಿಪಲನಕೋನ

| ಕ್ರಸಂ | ಪತನಕೋನ (i) | ಪ್ರತಿಫಲಿತ ಕೋನ (r) |
|---|---|---|
| 1 | $80^0$ | |
| 2 | $60^0$ | |
| 3 | $50^0$ | $50^0$ |
| 4 | $40^0$ | |
| 5 | $30^0$ | |
| 6 | | $20^0$ |

ಮೇಲಿನ ಕೋಷ್ಟಕಕ್ಕೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಪತನ ಕಿರಣ ಮತ್ತು ಪ್ರತಿಫಲನ ಕಿರಣ ಎಂದರೇನು?

______________________________

______________________________

2. ಪತನ ಕೋನ ಮತ್ತು ಪ್ರತಿಫಲನ ಕೋನಕ್ಕೂ ಇರುವ ವ್ಯತ್ಯಾಸ ತಿಳಿಸಿ.

______________________________

______________________________

3. ಪತನಕೋನ ಮತ್ತು ಪ್ರತಿಫಲನ ಕೋನ ಮತ್ತು ಲಂಬಕ್ಕೂ ಇರುವ ಸಂಬಂಧ ತಿಳಿಸಿ.

______________________________

______________________________

4. ಬೆಳಕಿನ ಪ್ರತಿಫಲನ ನಿಯಮಗಳು ಹೇಗೆ ನಮ್ಮ ದೈನಂದಿನ ಜೀವನದಲ್ಲಿ ಅನ್ವಯಿಸುತ್ತವೆ ಎಂದು ಉದಾಹರಣೆಗಳೊಂದಿಗೆ ಬರೆಯಿರಿ.

______________________________

______________________________

5. ಬೆಳಕಿನ ಪ್ರತಿಫಲನ ನಿಯಮಗಳನ್ನು ಬರೆಯಿರಿ.

______________________________

______________________________

______________________________

ವೀಡಿಯೋಪಾಠ : https://youtu.be/ElbumCnltJo?si=7GzBza89No9×0IWV

@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗೆ ನೀಡಿರುವ ದರ್ಪಣ ಮತ್ತು ಮಸೂರದ ವಿಧಗಳ ಚಿತ್ರಗಳನ್ನು ವೀಕ್ಷಿಸಿ. ಅವುಗಳ ಹೆಸರುಗಳನ್ನು ಸೂಕ್ತ ಖಾಲಿ ಜಾಗದಲ್ಲಿ ನಮೂದಿಸಿ.

| | | |
|---|---|---|
|  |  |  |
| | | |
|  |  |  |
| | | |

@KTBS NOT TO BE REPUBLISHED

ಮೇಲಿನ ಚಿತ್ರಗಳಿಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ದರ್ಪಣ ಎಂದರೇನು?

___

2. ಮಸೂರ ಎಂದರೇನು?

___

3. ಸಮತಲ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬ ಯಾವುದು?(ಸತ್ಯ /ಮಿಥ್ಯ)

___

4. ದರ್ಪಣದಲ್ಲಿ ನಡೆಯುವ ಕ್ರಿಯೆ ಯಾವುದು?(ಪ್ರತಿಫಲನ/ವಕ್ರೀಭವನ)

___

5. ಮಸೂರಗಳಲ್ಲಿ ನಡೆಯುವ ಕ್ರಿಯೆ ತಿಳಿಸಿ.(ಪ್ರತಿಫಲನ/ ವಕ್ರೀಭವನ)

___

ವೀಡಿಯೋಪಾಠ : https://youtu.be/AMrhQ5d2N48?si=4DaVJGnqsoJLoePJ

## ನಿಮಗಿದು ಗೊತ್ತೇ?

ಬಣ್ಣ ಗ್ರಹಿಕೆ: ಮಾನವನ ಕಣ್ಣು ಸರಿಸುಮಾರು 10 ಮಿಲಿಯನ್ ವಿಭಿನ್ನ ಬಣ್ಣಗಳನ್ನು ಗುರುತಿಸುತ್ತದೆ.

ವಿಶಿಷ್ಟ ಐರಿಸ್: ಕಣ್ಣಿನ ಬಣ್ಣದ ಭಾಗವಾದ ಐರಿಸ್ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ, ಇದು ಬೆರಳಚ್ಚುಗಳಿಗೆ ಹೋಲುತ್ತದೆ.

ಕಾರ್ನಿಯಾ: ಮಾನವ ದೇಹದಲ್ಲಿ ರಕ್ತ ನಾಳಗಳನ್ನು ಹೊಂದಿರದ ಏಕೈಕ ಅಂಗಾಂಶ ಕಾರ್ನಿಯಾ.

ಮಿಟುಕಿಸುವುದು: ಜನರು ನಿಮಿಷಕ್ಕೆ ಸರಾಸರಿ 15–20 ಬಾರಿ ಮಿಟುಕಿಸುತ್ತಾರೆ ಮತ್ತು ಸರಾಸರಿ ವ್ಯಕ್ತಿಯು ವರ್ಷಕ್ಕೆ ಸುಮಾರು 4.2 ಮಿಲಿಯನ್ ಬಾರಿ ಮಿಟುಕಿಸುತ್ತಾರೆ.

ಬಣ್ಣ ಕುರುಡುತನ: ಎಲ್ಲಾ ಶಿಶುಗಳು ಜನಿಸಿದಾಗ ಬಣ್ಣಗಳನ್ನು ಗುರುತಿಸುವುದಿಲ್ಲ ( ಬಣ್ಣ ಕುರುಡು ) ಮತ್ತು ಜನನದ ನಂತರ ಬಣ್ಣ ದೃಷ್ಟಿ ಬೆಳೆಯುತ್ತದೆ.

ಕಣ್ಣೀರು: ಕಣ್ಣುಗಳು ನಿರಂತರವಾಗಿ ಕಣ್ಣೀರನ್ನು ಉತ್ಪಾದಿಸುತ್ತವೆ, ಇದು ಕಣ್ಣಿನ ಮೇಲ್ಮೈಯನ್ನು ತೇವ ಮತ್ತು ಆರೋಗ್ಯಕರವಾಗಿಡಲು ಸಹಾಯ ಮಾಡುತ್ತದೆ.

ಕಣ್ಣಿನ ಗಾತ್ರ: ಕಣ್ಣುಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಲು ಸಾಮಾನ್ಯವಾಗಿ ಹುಟ್ಟಿನಿಂದ ಎರಡು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ವಯಸ್ಸಿನಲ್ಲಿ ಅವುಗಳ ಗಾತ್ರವು ಒಂದೇ ಆಗಿರುತ್ತದೆ.

ಬೆಳಕಿಗೆ ಸೂಕ್ಷ್ಮತೆ: ಕಣ್ಣುಗಳು ಕಡಿಮೆ ಬೆಳಕಿನ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬಹುದು, ಆದರೆ ಕತ್ತಲೆಯಲ್ಲಿ ಸಂಪೂರ್ಣವಾಗಿ ಹೊಂದಿಕೊಳ್ಳಲು ಸುಮಾರು 30 ನಿಮಿಷಗಳು ಬೇಕಾಗುತ್ತದೆ.

ಕಣ್ಣಿನ ಬಣ್ಣ: ಜನರು ವಯಸ್ಸಾದಂತೆ ಕಣ್ಣಿನ ಬಣ್ಣ ಬದಲಾಗಬಹುದು, ಕೆಲವು ವ್ಯಕ್ತಿಗಳು ಐರಿಸ್ ಕಪ್ಪಾಗುವುದನ್ನು ಅನುಭವಿಸುತ್ತಾರೆ.

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 19

## ಬೆಳಕಿನ ಬಹು ಪ್ರತಿಬಿಂಬಗಳು

S3M6W5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ದರ್ಪಣದಲ್ಲಿನ ಪ್ರತಿಫಲನ ಮತ್ತು ಬಹುಪ್ರತಿಬಿಂಬಗಳ ಕುರಿತು ಪ್ರತಿಫಲನಗಳ ಪ್ರಯೋಗಗಳನ್ನು ಕೈಗೊಂಡು ಪ್ರತಿಫಲನದ ನಿಯಮಗಳನ್ನು ಅರ್ಥೈಸಿಕೊಳ್ಳುವರು.

ವಿದ್ಯಾರ್ಥಿಗಳೇ, ದರ್ಪಣವು ತನ್ನ ಮೇಲೆ ಬಿದ್ದ ಬೆಳಕಿನ ದಿಕ್ಕನ್ನು ಬದಲಾಯಿಸುತ್ತದೆ. ದರ್ಪಣದಿಂದಾಗುವ ಬೆಳಕಿನ ದಿಕ್ಕಿನ ಬದಲಾವಣೆಯನ್ನು ಬೆಳಕಿನ ಪ್ರತಿಫಲನ ಎನ್ನುವರು. ಸಮತಲ ದರ್ಪಣಗಳು ತಮ್ಮ ಸುತ್ತಲೂ ನೇರ ಮತ್ತು ವಸ್ತುವಿನ ಗಾತ್ರದಷ್ಟೇ ಪ್ರತಿಬಿಂಬವನ್ನು ಉಂಟು ಮಾಡುತ್ತವೆ. ಸಮತಲ ದರ್ಪಣವು ವಸ್ತುವಿನ ಒಂದು ಪ್ರತಿಬಿಂಬವನ್ನು ಮಾತ್ರ ಉಂಟು ಮಾಡುತ್ತದೆ. ಎರಡು ಸಮತಲದರ್ಪಣಗಳನ್ನು ಸಂಯೋಜಿಸಿ ವಸ್ತುವನ್ನು ಇಟ್ಟಾಗ, ಬಹು ಪ್ರತಿಬಿಂಬಗಳು ಉಂಟಾಗುತ್ತವೆ.

**ಚಟುವಟಿಕೆ 1:**



@KTBS NOT TO BE REPUBLISHED

ಉರಿಯುತ್ತಿರುವ ಮೇಣದಬತ್ತಿಯನ್ನು ಸಮತಲ ದರ್ಪಣದ ಮುಂಭಾಗದಲ್ಲಿ ಇಡಿ. ಮೇಣದ ಬತ್ತಿಯ ಜ್ವಾಲೆಯನ್ನು ದರ್ಪಣದಲ್ಲಿ ನೋಡಲು ಪ್ರಯತ್ನಿಸಿ ವೀಕ್ಷಿಸಿದ ನಂತರ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ದರ್ಪಣದ ಮುಂಭಾಗದಲ್ಲಿ ಮೇಣದ ಬತ್ತಿಯನ್ನು ಬೇರೆ ಬೇರೆ ಸ್ಥಾನದಲ್ಲಿಟ್ಟು ಪ್ರತಿ ಸಂದರ್ಭದಲ್ಲೂ ಪ್ರತಿಬಿಂಬವನ್ನು ಗಮನಿಸಿ ದಾಖಲಿಸಿ.

   ______________________________

   ______________________________

2. ಪ್ರತಿ ಸಂದರ್ಭದಲ್ಲೂ ಪ್ರತಿಬಿಂಬ ನೇರವಾಗಿತ್ತೇ? ಹೌದು/ಇಲ್ಲ

   ______________________________

3. ಮೇಣದ ಬತ್ತಿಯ ಜ್ವಾಲೆಯು ವಸ್ತುವಿನಂತೆ ಮೇಲ್ಭಾಗದಲ್ಲಿಯೇ ಕಾಣುತ್ತಿದೆಯೇ? ಹೌದು/ಇಲ್ಲ

   ______________________________

4. ಸಮತಲ ದರ್ಪಣದಿಂದ ಉಂಟಾಗುವ ಪ್ರತಿಬಿಂಬದ ಸ್ವಭಾವವೇನು? ನೇರವಾಗಿರುತ್ತದೆ/ತಲೆಕೆಳಗಾಗಿರುತ್ತದೆ.

   ______________________________

5. ಸಮತಲ ದರ್ಪಣದಿಂದ ಉಂಟಾದ ವಸ್ತುವಿನ ಪ್ರತಿಬಿಂಬದ ಸ್ವಭಾವವೇನು? ಗಾತ್ರದಷ್ಟೇ ಇರುತ್ತದೆ/ ಚಿಕ್ಕದಾಗಿರುತ್ತದೆ.

   ______________________________

ವೀಡಿಯೋಪಾಠ : https://youtu.be/645×2Qu6C0w?si=sUQk9H-tDzM6SwSr

ಚಟುವಟಿಕೆ 2 :

ಎರಡು ಸಮತಲ ದರ್ಪಣಗಳನ್ನು ತೆಗೆದುಕೊಂಡು ಅವುಗಳ ಅಂಚುಗಳು ಸ್ಪರ್ಶಿಸುವಂತೆ ಪರಸ್ಪರ ಲಂಬವಾಗಿರಿಸಿ. ಅವುಗಳನ್ನು ಜೋಡಿಸಲು ಅಂಟುಪಟ್ಟಿಯನ್ನು ಬಳಸಬಹುದು. ಒಂದು ನಾಣ್ಯವನ್ನುಬೇರೆ ಬೇರೆ ಕೋನಗಳಲ್ಲಿ ದರ್ಪಣಗಳ ನಡುವೆ ಇರಿಸಿ. ನಾಣ್ಯವು ಎಷ್ಟು ಪ್ರತಿಬಿಂಬಗಳನ್ನು ಪಡೆಯಬಹುದೆಂದು ಕೋಷ್ಟಕದಲ್ಲಿ ದಾಖಲಿಸಿ.



| ಕೋನಗಳು | ಪ್ರತಿಬಿಂಬಗಳ ಸಂಖ್ಯೆ |
|---|---|
| $40^0$ | |
| $60^0$ | |
| $120^0$ | |
| $180^0$ | |
| $160^0$ | |

@KTBS NOT TO BE REPUBLISHED

ಮೇಲಿನ ಕೋಷ್ಟಕವನ್ನು ಬಳಸಿಕೊಂಡು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಮತಲ ದರ್ಪಣವು ವಸ್ತುವಿನ______________ನ್ನು ಮಾತ್ರ ಉಂಟು ಮಾಡುತ್ತದೆ. (ಪ್ರತಿಬಿಂಬ / ಛಾಯೆ)
2. ಎರಡು ಸಮತಲ ದರ್ಪಣಗಳನ್ನು ಸಂಯೋಜನೆಗೊಳಿಸಿ ಉಪಯೋಗಿಸಿದಾಗ ಉಂಟಾಗುವ ಪ್ರತಿಬಿಂಬ______________ಆಗಿರುತ್ತದೆ. (ಏಕ / ಬಹುಪ್ರತಿಬಿಂಬ)
3. ಬೇರೆ ಬೇರೆ ಕೋನಗಳಲ್ಲಿ ಪ್ರತಿಬಿಂಬಗಳ ಸಂಖ್ಯೆ ಬದಲಾಗಲು ಕಾರಣವೇನು?

   ______________________________________________
4. ಎರಡು ದರ್ಪಣಗಳನ್ನು ಸಮಾಂತರವಾಗಿರಿಸಿ ಅವುಗಳ ನಡುವೆ ಇರಿಸಿದ ಮೇಣದ ಬತ್ತಿಯು ಎಷ್ಟು ಪ್ರತಿಬಿಂಬ ಉಂಟುಮಾಡುತ್ತದೆ?

   ______________________________________________

ವೀಡಿಯೋ ಪಾಠ : https://youtu.be/fJu6OOXrRHw?si=OtYkMaWI3OAPoYVT

**ಚಟುವಟಿಕೆ 3 :**

ನೀವು ದರ್ಪಣದಲ್ಲಿ ನಿಮ್ಮನ್ನು ನೀವೇ ಪ್ರತಿನಿತ್ಯವು ನೋಡಿಕೊಳ್ಳುತ್ತೀರಿ. ಆಗ ದರ್ಪಣದಲ್ಲಿ ನೀವು ಕಾಣುವುದು ನಿಮ್ಮ ಮುಖದ ಪ್ರತಿಫಲನ ಅಲ್ಲವೇ? ಹಾಗಾದರೆ ಕೆಳಗಿನ ಚಿತ್ರವನ್ನು ಗಮನಿಸಿ.

ಚಿತ್ರದಲ್ಲಿ ಗುರುತಿಸಿರುವ ಭಾಗಗಳನ್ನು ಹೆಸರಿಸಿ.



ಪ್ರತಿಬಿಂಬ ಹೇಗೆ ಉಂಟಾಗುತ್ತದೆ ?

@KTBS NOT TO BE REPUBLISHED

**ಚಟುವಟಿಕೆ 4: :**

ಒಂದು ಹಲಗೆಯ ಮೇಲೆ ಸಮತಲ ದರ್ಪಣ ಇರಿಸಿ, ಒಂದು ಲೇಸರ್ ಟಾರ್ಚ್ ತೆಗೆದುಕೊಳ್ಳಿ. ಈಗ ಟಾರ್ಚ್ ನಿಂದ ದರ್ಪಣದ ಮೇಲೆ ಬೆಳಕು ನಿರ್ದಿಷ್ಟ ಕೋನದಲ್ಲಿ ಬೀಳುವಂತೆ ಹಿಡಿದು ವೀಕ್ಷಿಸಿರಿ.



1. ನೀವು ಏನನ್ನು ವೀಕ್ಷಿಸಿದಿರಿ?

___________________________________________

2. ನೀವು ವೀಕ್ಷಿಸಿದ ಬೆಳಕಿನ ಈ ವಿದ್ಯಮಾನವನ್ನು ಹೆಸರಿಸಿ.

___________________________________________

3. ನೀವು ಬಳಸಿದ ದರ್ಪಣದ ಮೇಲ್ಮೈ ಹೇಗಿದೆ?

___________________________________________

___________________________________________

___________________________________________

**ಚಟುವಟಿಕೆ 5 :**

ಮೇಲಿನ ಚಟುವಟಿಕೆಯನ್ನು ಕೈಗೊಂಡು ಈ ಕೆಳಗಿನ ಅಳತೆಯ ಪತನ ಕೋನಗಳಿಗೆ ಉಂಟಾಗುವ ಪ್ರತಿಫಲನ ಕೋನವನ್ನು ಅಳೆಯಿರಿ, ದೊರೆತ ಪ್ರತಿಫಲನ ಕೋನದ ಅಳತೆಗೂ ಪತನ ಕೋನದ ಅಳತೆಗೂ ಇರುವ ಸಂಬಂಧವನ್ನು ತೀರ್ಮಾನಿಸಿ.

| ಪತನ ಕೋನ | ಪ್ರತಿಫಲನ ಕೋನ | ತೀರ್ಮಾನ |
|---|---|---|
| $20^0$ | | |
| $40^0$ | | |
| $60^0$ | | |
| $80^0$ | | |
| $90^0$ | | |

@KTBS
NOT TO BE REPUBLISHED

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 20

## ಮಾನವನ ಕಣ್ಣು

G8L5H3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಮಾನವನ ಕಣ್ಣಿನ ರಚನೆ ಮತ್ತು ಕಾರ್ಯಗಳನ್ನು ತಿಳಿಯುವರು.**

ವಿದ್ಯಾರ್ಥಿಗಳೇ, ವಸ್ತುಗಳಿಂದ ಪ್ರತಿಫಲಿತವಾದ ಬೆಳಕು ನಮ್ಮ ಕಣ್ಣುಗಳನ್ನು ಪ್ರವೇಶಿಸಿದಾಗ ಮಾತ್ರ ನಾವು ಅವುಗಳನ್ನು ನೋಡಲು ಸಾಧ್ಯ. ಕಣ್ಣು ನಮ್ಮ ಜ್ಞಾನೇಂದ್ರಿಯಗಳಲ್ಲಿ ಒಂದು ಪ್ರಮುಖ ಅಂಗ. ಆದ್ದರಿಂದ ಅದರ ರಚನೆ ಮತ್ತು ಕಾರ್ಯಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಕಣ್ಣು ಹೆಚ್ಚು ಕಡಿಮೆ ಗೋಲಾಕಾರವಾಗಿದೆ. ಕಣ್ಣಿನ ಹೊರಕವಚವು ಬಿಳಿಯಾಗಿದೆ. ಇದು ಕಠಿಣವಾಗಿರುವುದರಿಂದ ಕಣ್ಣಿನ ಒಳಭಾಗವನ್ನು ಅಪಘಾತಗಳಿಂದ ರಕ್ಷಿಸಬಹುದು. ಕಣ್ಣು ದೂರದ ಮತ್ತು ಸಮೀಪದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲ ಅತ್ಯಂತ ಅದ್ಭುತ ಸಾಧನ.

**ಚಟುವಟಿಕೆ 1:**

ಮಾನವನ ಕಣ್ಣಿನ ಚಿತ್ರವನ್ನು ಗಮನಿಸಿ. ಖಾಲಿ ಇರುವ ಭಾಗಗಳನ್ನು ಗುರುತಿಸಿ ಮತ್ತು ಕಣ್ಣಿನ ಭಾಗಗಳ ವಿವಿಧ ಕಾರ್ಯಗಳನ್ನು ಕೋಷ್ಟಕದಲ್ಲಿ ಬರೆಯಿರಿ.

@KTBS NOT TO BE REPUBLISHED



ಮಾನವನ ಕಣ್ಣು

| ಕಣ್ಣಿನ ಭಾಗಗಳು | ಕಾರ್ಯಗಳು |
|---|---|
| ಕಾರ್ನಿಯಾ | |
| ಪಾಪೆ | |
| ವರ್ಣಪಟಲ | |
| ರೆಟಿನಾ | |
| ಪೀನ ಮಸೂರ | |
| ಕಾಚಕರಸಧಾತು | |

1. ಕಣ್ಣಿನ ದೃಷ್ಟಿ ದೋಷಗಳು ಯಾವುವು?

2. ತಲೆಕೆಳಗಾದ ಪ್ರತಿಬಿಂಬ ಉಂಟಾಗುವ ಕಣ್ಣಿನ ಭಾಗ ಯಾವುದು?

3. ಕಣ್ಣಿನಲ್ಲಿರುವ ಮಸೂರ ಯಾವುದು?

4. ಕಣ್ಣಿನ ಹೊಂದಾಣಿಕೆ ಎಂದರೇನು?

@KTBS NOT TO BE REPUBLISHED

ವೀಡಿಯೋ ಪಾಠ : https://youtu.be/48BGwwphe3g?si=6h8tBrWPc0KRvRBQ

**ಸೂಚನೆ:** ನಮ್ಮ ಕಣ್ಣುಗಳನ್ನು ಅತ್ಯಂತ ಆರೋಗ್ಯಕರ ಮತ್ತು ಸುರಕ್ಷಿತವಾಗಿರಿಸಿಕೊಳ್ಳಲು ವಹಿಸಬೇಕಾದ ಎಚ್ಚರಿಕೆಯ ಕ್ರಮಗಳನ್ನು ಕುರಿತು ಶಿಕ್ಷಕರು ಹಾಗೂ ಹಿರಿಯರೊಂದಿಗೆ ಚರ್ಚಿಸಿ.

## ಕ್ರೋಢೀಕರಣ ಹಂತ –ಅವಧಿ–1

## ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ರಾಸಾಯನಿಕ ಕ್ರಿಯೆಯ ವಿಧಗಳು ಸರಿದೂಗಿಸಿದ ಸಮೀಕರಣಗಳ ಬಗ್ಗೆ ತಿಳಿಯುವರು.
2. ವಿದ್ಯಾರ್ಥಿಗಳು ರಾಸಾಯನಿಕ ಕ್ರಿಯೆಯ ಪ್ರಾಯೋಗಿಕ ಅನುಭವದ ಮೇಲೆ ಸಮೀಕರಣಗಳನ್ನು ಸರಿದೂಗಿಸುವರು.

### ಅಭ್ಯಾಸ ಪರೀಕ್ಷೆ

1. ರಾಸಾಯನಿಕ ಕ್ರಿಯೆಗಳು ಜರುಗಿದಾಗ ಉಂಟಾಗುವ ಬದಲಾವಣೆಗಳನ್ನು ಪಟ್ಟಿ ಮಾಡಿ . (2 ಅಂಕಗಳು)

NOT TO BE REPUBLISHED @KTBS

2. ಕಮಟುವಿಕೆ ಎಂದರೇನು? ಇದನ್ನು ತಡೆಗಟ್ಟುವ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ. (2 ಅಂಕಗಳು)

3. ಈ ಕೆಳಗಿನ ರಾಸಾಯನಿಕ ಕ್ರಿಯೆಯಲ್ಲಿ ಉತ್ಕರ್ಷಣ ಮತ್ತು ಅಪಕರ್ಷಣಗೊಂಡಿರುವ ವಸ್ತುಗಳನ್ನು ಗುರುತಿಸಿ. . (2 ಅಂಕಗಳು)

i. $ZnO + C \longrightarrow Zn + CO$

ii. $CuO + H_2 \longrightarrow Cu + H_2O$

4. ಸಂಕ್ಷಾರಣ ಎಂದರೇನು ? ಸಂಕ್ಷಾರಣ ತಡೆಯುವ ವಿಧಾನಗಳನ್ನು ತಿಳಿಸಿ. (2ಅಂಕಗಳು)

5. ಈ ಕೆಳಗಿನ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (3 ಅಂಕಗಳು)

i) ಸೋಡಿಯಂ ಹೈಡ್ರಾಕ್ಸೈಡ್+ಸಲ್ಫ್ಯೂರಿಕ್ ಆಮ್ಲ → ಸೋಡಿಯಂ ಸಲ್ಫೇಟ್ + ನೀರು

ii) ಕ್ಯಾಲ್ಸಿಯಂ ಕಾರ್ಬೋನೇಟ್ → ಕ್ಯಾಲ್ಸಿಯಂ ಆಕ್ಸೈಡ್ + ಕಾರ್ಬನ್ ಡೈಆಕ್ಸೈಡ್

iii) ಹೈಡ್ರೋಜನ್ + ಕ್ಲೋರಿನ್ → ಹೈಡ್ರೋಜನ್ ಕ್ಲೋರೈಡ್

@KTBS NOT TO BE REPUBLISHED

6. (3 ಅಂಕಗಳು)

i) ಮೆಗ್ನೀಸಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು ಏಕೆ ?

ii) ಸೀಸದ ನೈಟ್ರೇಟ್ ಅನ್ನು ಕಾಯಿಸಿದಾಗ ಬಿಡುಗಡೆಯಾಗುವ ಕಂದು ಬಣ್ಣದ ಧೂಮವನ್ನು ಹೆಸರಿಸಿ. ಈ ಕ್ರಿಯೆಗೆ ರಾಸಾಯನಿಕ ಸಮೀಕರಣವನ್ನು ಬರೆಯಿರಿ.

7. ಈ ಕೆಳಗಿನ ರಾಸಾಯನಿಕ ಸಮೀಕರಣಗಳನ್ನು ಸರಿದೂಗಿಸಿ. (3 ಅಂಕಗಳು)

i. $Cu + O_2 \rightarrow CuO$

ii. $Mg + HCl \rightarrow MgCl_2 + H_2$

iii. $BaCl_2 + Al_2(SO_4)_3 \rightarrow BaSO_4 + AlCl_3$

8. ಕಾರಣ ಕೊಡಿ (3 ಅಂಕಗಳು)

i. ಕಬ್ಬಿಣವು ಗಾಳಿಗೆ ತೆರೆದಿಟ್ಟಾಗ ತುಕ್ಕು ಹಿಡಿಯುತ್ತದೆ

ii. ತಾಮ್ರದಿಂದ ಮಾಡಿದ ವಸ್ತುಗಳನ್ನು ಗಾಳಿಗೆ ತೆರೆದಿಟ್ಟಾಗ ತಮ್ಮ ಮೇಲ್ಮೈನ ಹೊಳಪನ್ನು ಕಳೆದುಕೊಳ್ಳುತ್ತವೆ.

@KTBS NOT TO BE REPUBLISHED

9. (5 ಅಂಕಗಳು)

A. ಒಂದು ಪ್ರನಾಳದಲ್ಲಿರುವ 5ml ಸೋಡಿಯಂ ಸಲ್ಫೇಟ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ಬೇರಿಯಂ ಕ್ಲೋರೈಡ್ ದ್ರಾವಣ ಸೇರಿಸಿದಾಗ,

i) ಉತ್ಪತ್ತಿಯಾದ ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪ ಯಾವುದು ?

ii) ಬಿಳಿಯ ಪ್ರಕ್ಷೇಪ ಉಂಟಾಗಲು ಕಾರಣವಾದ ಅಯಾನುಗಳನ್ನು ಹೆಸರಿಸಿ .

iii) ಇಲ್ಲಿ ಜರುಗಿದ ರಾಸಾಯನಿಕ ಕ್ರಿಯೆಯ ವಿಧವನ್ನು ತಿಳಿಸಿ.

B. ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಒಂದು ಕಬ್ಬಿಣದ ಮೊಳೆಯನ್ನು ಮುಳುಗಿಸಿದೆ.
ಆಗ ಇಲ್ಲಿ ಯಾವ ವಿಧದ ರಾಸಾಯನಿಕ ಕ್ರಿಯೆ ಜರುಗುವುದು ? ಈ ಕ್ರಿಯೆಗೆ ರಾಸಾಯನಿಕ ಸಮೀಕರಣವನ್ನು ಬರೆಯಿರಿ.

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

@KTBS NOT TO BE REPUBLISHED

**ಹೆಚ್ಚಿನ ಪ್ರಶ್ನೆಗಳು :**

1. ರಾಸಾಯನಿಕ ಕ್ರಿಯೆ ನಡೆದಿದೆ ಎಂದು ಯಾವ ಅಂಶಗಳ ಆಧಾರದ ಮೇಲೆ ಗುರುತಿಸಬಹುದು.(2 ಅಂಕಗಳು)
2. ರಾಸಾಯನಿಕ ಕ್ರಿಯೆಯ ವಿಧಗಳು ಯಾವುವು? ಪ್ರತಿಯೊಂದಕ್ಕೂ ಒಂದೊಂದು ರಾಸಾಯನಿಕ ಸಮೀಕರಣ ಬರೆದು ಸರಿದೂಗಿಸಿ. (3 ಅಂಕಗಳು)

# ಕ್ರೋಢೀಕರಣ ಹಂತ – ಅವಧಿ – 2

## ಜೀವಕ್ರಿಯೆಗಳು

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ಸ್ವಪೋಷಕ ಪರಪೋಷಕ ಮತ್ತು ಪರಾವಲಂಬಿ ಜೀವಿಗಳ ಬಗ್ಗೆ ತಿಳಿಯುವರು.
2. ವಿದ್ಯಾರ್ಥಿಗಳು ಮಾನವನ ಜೀರ್ಣಾಂಗವ್ಯೂಹ, ರಕ್ತ ಪರಿಚಲನಾಂಗವ್ಯೂಹ, ಮತ್ತು ಶ್ವಾಸಾಂಗವ್ಯೂಹವನ್ನು ತಿಳಿಯುವರು.

**ಅಭ್ಯಾಸ ಪರೀಕ್ಷೆ**

1. ಪರಾವಲಂಬಿ ಎಂದರೇನು? ಪರಾವಲಂಬಿ ಜೀವಿಗಳಿಗೆ ಎರಡು ಉದಾಹರಣೆ ಕೊಡಿ. (2 ಅಂಕಗಳು)

2. ವಾಯುವಿಕ ಉಸಿರಾಟ ಮತ್ತು ಅವಾಯುವಿಕ ಉಸಿರಾಟಗಳಿಗಿರುವ ವ್ಯತ್ಯಾಸವೇನು? (2ಅಂಕಗಳು)

3. ಮಾನವನ ವಿಸರ್ಜನಾಂಗವ್ಯೂಹದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ. (2 ಅಂಕಗಳು)

4. ಕ್ಸೈಲಂ ಮತ್ತು ಫ್ಲೋಯಂಗಳಲ್ಲಿನ ಸಾಗಾಣಿಕೆ ನಡುವಿನ ವ್ಯತ್ಯಾಸವೇನು? (2 ಅಂಕಗಳು)

@KTBS NOT TO BE REPUBLISHED

5. ಮಾನವನ ಜೀರ್ಣನಾಳದಲ್ಲಿ ಈ ಮುಂದಿನ ಕಿಣ್ವಗಳ ಪಾತ್ರವೇನು? (3 ಅಂಕಗಳು)
ಅ) ಟ್ರಿಪ್ಸಿನ್ ಆ) ಅಮೈಲೇಸ್ ಇ) ಲೈಪೇಸ್

6. ಸ್ವಪೋಷಕಗಳಲ್ಲಿ ಪೋಷಣೆ ಮತ್ತು ಪರಪೋಷಕಗಳಲ್ಲಿ ಪೋಷಣೆಗಳ ನಡುವಿನ ವ್ಯತ್ಯಾಸವೇನು? (3 ಅಂಕಗಳು)

7. ಮಾನವನ ಸಣ್ಣಕರುಳಿನಲ್ಲಿ ನಡೆಯುವ ಜೀರ್ಣಕ್ರಿಯೆಯನ್ನು ವಿವರಿಸಿ. (3 ಅಂಕಗಳು)

8. ಅಪಧಮನಿ, ಅಭಿಧಮನಿ ಹಾಗೂ ಲೋಮನಾಳಗಳ ಕಾರ್ಯವೇನು? (3 ಅಂಕಗಳು)

9. (5 ಅಂಕಗಳು)
ಎ) ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅವಶ್ಯಕವಾದ ವಸ್ತುಗಳನ್ನು ಪಟ್ಟಿ ಮಾಡಿರಿ.
ಬಿ) ದ್ಯುತಿ ಸಂಶ್ಲೇಷಣೆ ಕ್ರಿಯೆಯಲ್ಲಿ ಜರುಗುವ ಘಟನೆಗಳನ್ನು ಬರೆಯಿರಿ.
ಸಿ) ದ್ಯುತಿ ಸಂಶ್ಲೇಷಣೆ ಕ್ರಿಯೆಯ ಸಮೀಕರಣ ಬರೆಯಿರಿ.

@KTBS NOT TO BE REPUBLISHED

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

**ಹೆಚ್ಚಿನ ಪ್ರಶ್ನೆಗಳು :**

1. ಸ್ವಪೋಷಕ ಮತ್ತು ಪರಪೋಷಕ ಜೀವಿಗಳಿಗೆ ತಲಾ 4 ಉದಾಹಣೆಗಳನ್ನು ಕೊಡಿ. (2 ಅಂಕಗಳು)
2. ಮಾನವನ ಹೃದಯದಲ್ಲಿನ ರಕ್ತ ಪರಿಚಲನೆಯನ್ನು ವಿವರಿಸಿ. (3 ಅಂಕಗಳು)

©KTBS NOT TO BE REPUBLISHED

## ಕ್ರೋಢೀಕರಣ ಹಂತ – ಅವಧಿ – 3

## ವಿದ್ಯುಚ್ಛಕ್ತಿ

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ವಿದ್ಯುತ್ ಪ್ರವಾಹ, ವಿದ್ಯುತ್ ವಾಹಕಗಳು ಮತ್ತು ಅವಾಹಕಗಳನ್ನು ತಿಳಿಯುವರು.
2. ವಿದ್ಯಾರ್ಥಿಗಳು ವಿದ್ಯುತ್ ಮಂಡಲ, ವಿದ್ಯುತ್ ಆಘಾತ, ವಿದ್ಯುತ್‌ವಿಭಜನೆ ಕ್ರಿಯಯನ್ನು ತಿಳಿಯುವರು.

### ಅಭ್ಯಾಸ ಪರೀಕ್ಷೆ

1. ನೀವು ನೋಡಿರುವ ಯಾವುದಾದರೂ ಎರಡು ವಾಹಕ ಮತ್ತು ಅವಾಹಕಗಳನ್ನು ಹೆಸರಿಸಿ. (2 ಅಂಕಗಳು)

@KTBS NOT TO BE REPUBLISHED

2. ಸಂಯುಕ್ತಗಳ ಮೂಲಕ ವಿದ್ಯುತ್ ಪ್ರವಹಿಸಿದಾಗ ಉಂಟಾಗುವ ವಿದ್ಯುದ್ವಿಭಜನ ಕ್ರಿಯೆಯ ಚಿತ್ರವನ್ನು ಬರೆಯಿರಿ. (2 ಅಂಕಗಳು)

3. ಒಂದು ಸರಳ ವಿದ್ಯುತ್ ಮಂಡಲದಲ್ಲಿ ಇರಬೇಕಾದ ನಾಲ್ಕು ವಸ್ತುಗಳನ್ನು ಪಟ್ಟಿ ಮಾಡಿ. (2 ಅಂಕಗಳು)

4. ಮನೆಯೊಳಗೆ ಬಳಸಿರುವ ವಿದ್ಯುತ್ ತಂತಿಗೆ ಅವಾಹಕ ಹೊದಿಕೆ ಇಲ್ಲದಿದ್ದರೆ ಸಂಭವಿಸಬಹುದಾದ ಅಪಾಯಗಳೇನು? (2 ಅಂಕಗಳು)

5. ವಿದ್ಯುತ್ ಆವೇಶಗಳು ಹೇಗೆ ಉಂಟಾಗುತ್ತವೆ? ಅವುಗಳ ಹೆಸರೇನು? ಅವುಗಳನ್ನು ಹೇಗೆ ಪತ್ತೆ ಹಚ್ಚಬಹುದು? (3 ಅಂಕಗಳು)

6. ವಿದ್ಯುತ್ ಆಘಾತ ಉಂಟಾಗಲು ಕಾರಣವೇನು? ಅದರಿಂದ ಪಾರಾಗುವುದು ಹೇಗೆ? ವಿವರಿಸಿ. (3 ಅಂಕಗಳು)

7. ವಿದ್ಯುತ್‌ನ ಬಳಕೆಯಲ್ಲಿರುವ ಅಪಾಯಗಳನ್ನು ತಿಳಿಸಿ, ಅವುಗಳಿಗೆ ಪರಿಹಾರವನ್ನು ಸೂಚಿಸಿ.
(3 ಅಂಕಗಳು)

8. ವಿದ್ಯುತ್ ಮಂಡಲದ ಎರಡು ವಿಧಗಳು ಯಾವುವು? ಅವುಗಳ ನಡುವಿನ ವ್ಯತ್ಯಾಸವೇನು?
(3 ಅಂಕಗಳು)

9. ಮನೆಯಲ್ಲಿ ಬಳಸಲಾಗುವ ಯಾವುದಾದರೂ 5 ವಿದ್ಯುತ್ ಸಾಧನಗಳನ್ನು ಹೆಸರಿಸಿ. ಅವುಗಳ ಉಪಯೋಗವನ್ನು ಬರೆಯಿರಿ. (5 ಅಂಕಗಳು)

@KTBS NOT TO BE REPUBLISHED

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

**ಹೆಚ್ಚಿನ ಪ್ರಶ್ನೆಗಳು :**

1. ವಿದ್ಯುತ್ ಪ್ರವಾಹ ಮತ್ತು ವಿಭವಾಂತರ ಎಂದರೇನು? (2ಅಂಕಗಳು)
2. ಫ್ಯೂಸ್‌ನ ಕಾರ್ಯವೇನು? ಬಳಸುವ ಲೋಹದ ಘಟಕಗಳು ಯಾವುವು? (3 ಅಂಕಗಳು)

## ಕ್ರೋಢೀಕರಣ ಹಂತ – ಅವಧಿ – 4
## ಲೋಹಗಳು ಮತ್ತು ಅಲೋಹಗಳು

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ಲೋಹ ಮತ್ತು ಅಲೋಹಗಳ ಭೌತ ಮತ್ತು ರಾಸಾಯನಿಕ ಗುಣಲಕ್ಷಣಗಳ ವ್ಯತ್ಯಾಸಗಳನ್ನು ತಿಳಿಯುವರು.
2. ವಿದ್ಯಾರ್ಥಿಗಳು ಲೋಹ ಮತ್ತು ಅಲೋಹಗಳ ಉಪಯೋಗಗಳನ್ನು ತಿಳಿಯುವರು.

### ಅಭ್ಯಾಸ ಪರೀಕ್ಷೆ

1. ಲೋಹಗಳ ಯಾವುದಾದರೂ ನಾಲ್ಕು ಉಪಯೋಗಗಳನ್ನು ಬರೆಯಿರಿ. (2 ಅಂಕಗಳು)

2. ದ್ರವರೂಪದ ಲೋಹ ಮತ್ತು ಅಲೋಹವನ್ನು ಹೆಸರಿಸಿ. (2 ಅಂಕಗಳು)

@KTBS
NOT TO BE REPUBLISHED

3. ಈ ವಸ್ತುಗಳಲ್ಲಿ ಸಾಮಾನ್ಯವಾಗಿ ಬಳಸುವ ಲೋಹ ಅಥವಾ ಅಲೋಹವನ್ನು ಹೆಸರಿಸಿ.
ಎ. ಇದ್ದಿಲು ಬಿ. ಮೊಳೆ ಸಿ. ಪೆನ್ಸಿಲ್ ಮದ್ದು ಡಿ. ಉಷ್ಣತಾಮಾಪಕದಲ್ಲಿರುವ ದ್ರವ (2 ಅಂಕಗಳು)

4. ನಿಮ್ಮ ಮನೆಯಲ್ಲಿ ಕಂಡುಬರುವ ಯಾವುದಾದರು ನಾಲ್ಕು ಲೋಹದ ವಸ್ತುಗಳನ್ನು ಪಟ್ಟಿ ಮಾಡಿ . (2 ಅಂಕಗಳು)

5. ಲೋಹ ಮತ್ತು ಅಲೋಹಗಳಿಗಿರುವ ಮೂರು ವ್ಯತ್ಯಾಸ ತಿಳಿಸಿ. (3 ಅಂಕಗಳು)

6. ಲೋಹಗಳು ಒಳ್ಳೆಯ ಉಷ್ಣವಾಹಕಗಳು ಎಂಬುದನ್ನು ಹೇಗೆ ನಿರೂಪಿಸುವಿರಿ. (3 ಅಂಕಗಳು)

7. ಈ ಕ್ರಿಯೆಯಲ್ಲಿ ಕಂಡುಬರುವ ಅಲೋಹಗಳನ್ನು ಹೆಸರಿಸಿ. (3 ಅಂಕಗಳು)

ಎ. ಉಸಿರಾಟ ಬಿ. ಜಠರಾಮ್ಲ ಸಿ. ದ್ಯುತಿಸಂಶ್ಲೇಷಣೆ ಕ್ರಿಯೆ

©KTBS NOT TO BE REPUBLISHED

8. ಇವುಗಳನ್ನು ಲೋಹ ಮತ್ತು ಅಲೋಹಗಳಾಗಿ ವಿಂಗಡಿಸಿ. (3 ಅಂಕಗಳು)

ಎ. ಕಲ್ಲಿದ್ದಲು ಬಿ. ಆಕ್ಸಿಜನ್ ಸಿ. ತಾಮ್ರ ಡಿ. ಪಾದರಸ ಇ. ಬ್ರೋಮಿನ್ ಎಫ್. ಮೆಗ್ನೀಸಿಯಂ

9. ವಾಹಕ ಮತ್ತು ಅವಾಹಕ ವಸ್ತುಗಳನ್ನು ಪತ್ತೆ ಹಚ್ಚಲು ಒಂದು ಸರಳ ಪ್ರಯೋಗವನ್ನು ವಿವರಿಸಿರಿ. (5 ಅಂಕಗಳು)

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

**ಹೆಚ್ಚಿನ ಪ್ರಶ್ನೆಗಳು :**

1. ಕ್ಯಾಲ್ಸಿಯಂ ನೀರಿನೊಂದಿಗೆ ವರ್ತಿಸುವುದರ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.(2 ಅಂಕಗಳು)
2. ತಾಮ್ರದ ವಿದ್ಯುತ್ ವಿಭಜನೆಯ ಚಿತ್ರ ಬರೆದು ಭಾಗಗಳನ್ನು ಗುರುತಿಸಿ. (3 ಅಂಕಗಳು)
3. ಲೋಹಗಳ ಉದ್ಧರಣದ ವಿಧಾನಗಳನ್ನು ಪಟ್ಟಿ ಮಾಡಿ. (3 ಅಂಕಗಳು)

©KTBS NOT TO BE REPUBLISHED

## ಕ್ರೋಢೀಕರಣ ಹಂತ – ಅವಧಿ – 5
## ಬೆಳಕು ಪ್ರತಿಫಲನ ಮತ್ತು ವಕ್ರೀಭವನ

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ಬೆಳಕಿನ ಪ್ರತಿಫಲನ ಮತ್ತು ವಕ್ರೀಭವನವನ್ನು ತಿಳಿಯುವರು.
2. ಮಸೂರಗಳು, ಮತ್ತು ದರ್ಪಣಗಳ ಉಪಯೋಗಗಳನ್ನು ತಿಳಿಯುವರು.

### ಅಭ್ಯಾಸ ಪ್ರಶ್ನೆಗಳು

1. ಮಿಥ್ಯ ಪ್ರತಿಬಿಂಬ ಲಕ್ಷಣಗಳನ್ನು ಬರೆಯಿರಿ? (2 ಅಂಕಗಳು)

2. ಬೆಳಕಿನ ವಕ್ರೀಭವನದ ನಿಯಮಗಳನ್ನು ನಿರೂಪಿಸಿರಿ. (2 ಅಂಕಗಳು)

3. ನೀರನ್ನು ಹೊಂದಿರುವ ಟ್ಯಾಂಕ್ ಅಥವಾ ಕೊಳದ ತಳವು ಏಕೆ ಮೇಲೆ ಬಂದಂತೆ ಭಾಸವಾಗುತ್ತದೆ ? ಇದೇ ರೀತಿಯ ಎರಡು ವಿದ್ಯಮಾನಗಳನ್ನು ಹೆಸರಿಸಿರಿ. (2 ಅಂಕಗಳು)

4. ಬೆಳಕಿನ ಪ್ರತಿಫಲನದ ಎರಡು ನಿಯಮಗಳನ್ನು ತಿಳಿಸಿ. (2 ಅಂಕಗಳು)

@KTBS
NOT TO BE REPUBLISHED

5. ನಿಮ್ನ ದರ್ಪಣದಿಂದ ರೂಪುಗೊಂಡ ಪ್ರತಿಬಿಂಬಗಳ ರೇಖಾಚಿತ್ರಗಳನ್ನು ಬರೆಯುವಾಗ ಪಾಲಿಸುವ ನಿಯಮಗಳನ್ನು ಬರೆಯಿರಿ. (3 ಅಂಕಗಳು)

6. (3 ಅಂಕಗಳು)

i) ದರ್ಪಣದ ವರ್ಧನೆಯನ್ನು ವ್ಯಾಖ್ಯಾನಿಸಿ ಸೂತ್ರವನ್ನು ಬರೆಯಿರಿ.

ii) ನಿಮ್ನ ಮಸೂರದಿಂದ ಉಂಟಾಗುವ ವರ್ಧನೆಯು –2 ಆಗಿದೆ. ಈ ಹೇಳಿಕೆಯ ಅರ್ಥವೇನು? ಅದರಿಂದ ಪಡೆದ ಪ್ರತಿಬಿಂಬಕ್ಕೆ ಸಂಬಂಧಿಸಿದ ಮಾಹಿತಿಯನ್ನು ಬರೆಯಿರಿ.

@KTBS
NOT TO BE REPUBLISHED

7. ಕೆಳಗಿನ ಸನ್ನಿವೇಶದಲ್ಲಿ ಬಳಸುವ ದರ್ಪಣದ ವಿಧವನ್ನು ಹೆಸರಿಸಿ. (3 ಅಂಕಗಳು)

i) ಕಾರಿನ ಹೆಡ್ ಲೈಟ್ ಗಳು

ii) ವಾಹನಗಳ ಹಿನ್ನೋಟ ದರ್ಪಣ

iii) ಸೌರ ಕುಲುಮೆ

8. ಸಮತಲ ದರ್ಪಣಗಳಿಂದ ರೂಪುಗೊಂಡ ಪ್ರತಿಬಿಂಬದ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿ ಮಾಡಿ (3 ಅಂಕಗಳು)

9. ಗೋಳಾಕಾರದ ದರ್ಪಣಗಳ ಸಂದರ್ಭದಲ್ಲಿ ಈ ಕೆಳಗಿನ ಪದಗಳನ್ನು ವ್ಯಾಖ್ಯಾನಿಸಿ. (5 ಅಂಕಗಳು)
i)ದರ್ಪಣ ಧ್ರುವ ii) ವಕ್ರತಾ ಕೇಂದ್ರ iii) ಪ್ರಧಾನ ಅಕ್ಷ iv) ಪ್ರಧಾನ ಸಂಗಮ

@KTBS
NOT TO BE REPUBLISHED

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

**ಹೆಚ್ಚಿನ ಪ್ರಶ್ನೆಗಳು :**

1. ಸತ್ಯ ಮತ್ತು ಮಿಥ್ಯ ಪ್ರತಿಬಿಂಬಗಳಿಗಿರುವ ವ್ಯತ್ಯಾಸ ತಿಳಿಸಿ. (2 ಅಂಕಗಳು)
2. ನಿಮ್ನ ಮತ್ತು ಪೀನದರ್ಪಣಗಳಿಗಿರುವ ವ್ಯತ್ಯಾಸ ಬರೆಯಿರಿ. (2 ಅಂಕಗಳು)
3. ಮಸೂರದ ಸಾಮರ್ಥ್ಯ ಎಂದರೇನು? ಅಳೆಯುವ ಏಕಮಾನ ತಿಳಿಸಿ. (3 ಅಂಕಗಳು)

## ಕ್ರೋಢೀಕರಣ ಹಂತ – ಅವಧಿ – 6
## ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ?

**ಸಮಯ** : 80 ನಿಮಿಷಗಳು **ಅಂಕಗಳು** : 25

**ಅಧಿವೇಶನದ ಉದ್ದೇಶಗಳು:**

1. ವಿದ್ಯಾರ್ಥಿಗಳು ಸಂತಾನೋತ್ಪತ್ತಿಯಲ್ಲಿ ಲೈಂಗಿಕ ಮತ್ತು ಅಲೈಂಗಿಕ ಸಂತಾನೋತ್ಪತ್ತಿ ಬಗ್ಗೆ ತಿಳಿಯುವರು.
2. ಮಾನವನ ಪುರುಷ ಮತ್ತು ಸ್ತ್ರೀ ಸಂತಾನೋತ್ಪತ್ತಿ ವ್ಯೂಹವನ್ನು ತಿಳಿಯುವರು.

### ಅಭ್ಯಾಸ ಪ್ರಶ್ನೆಗಳು

©KTBS NOT TO BE REPUBLISHED

1. ಮಾನವನ ವೀರ್ಯಾಣುಗಳು ಮತ್ತು ಅಂಡಾಣುಗಳ ನಡುವಿನ ಪ್ರಮುಖ ವ್ಯತ್ಯಾಸವೇನು? (2 ಅಂಕಗಳು)

2. ಅಂಡಾಶಯದ ಎರಡು ಕಾರ್ಯಗಳನ್ನು ಬರೆಯಿರಿ. (2 ಅಂಕಗಳು)

3. ಗರ್ಭಧಾರಣೆಯ ಅವಧಿ ಎಂದರೇನು? (2 ಅಂಕಗಳು)

4. ಪುನರುತ್ಪಾದನೆಯ ಸಾಮರ್ಥ್ಯವನ್ನು ಹೊಂದಿರುವ ಎರಡು ಸರಳ ಜೀವಿಗಳನ್ನು ಹೆಸರಿಸಿ. (2 ಅಂಕಗಳು)

5. ಗರ್ಭಾಶಯದಲ್ಲಿ ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ತಿಳಿಸಿ. (3 ಅಂಕಗಳು)
   a ) ಅಂಡಾಣು ಫಲಿತಗೊಂಡಾಗ
   b ) ಅಂಡಾಣು ಫಲಿತಗೊಳ್ಳದಿದ್ದಾಗ

6. ಮಾನವ ಸ್ತ್ರೀ ಸಂತಾನೋತ್ಪತ್ತಿ ವ್ಯವಸ್ಥೆಯ ಈ ಕೆಳಗಿನ ಭಾಗಗಳ ಕಾರ್ಯಗಳನ್ನು ಬರೆಯಿರಿ

i) ಅಂಡಾಶಯ ii) ಫೆಲೋಪಿಯನ್ ನಾಳ ii) ಗರ್ಭಾಶಯ (3 ಅಂಕಗಳು)

7. ಜರಾಯು ಎಂದರೇನು? ಜರಾಯುವಿನ ಯಾವುದಾದರೂ ಎರಡು ಪ್ರಮುಖ ಕಾರ್ಯಗಳನ್ನು ಬರೆಯಿರಿ. (3 ಅಂಕಗಳು)

@KTBS
NOT TO BE REPUBLISHED

8. ಅಲೈಂಗಿಕ ಸಂತಾನೋತ್ಪತ್ತಿ ಎಂದರೇನು? ಹೈಡ್ರಾದಲ್ಲಿ ಮೊಗ್ಗುವಿಕೆ ಪ್ರಕ್ರಿಯೆಯನ್ನು ವಿವರಿಸಿ. (3 ಅಂಕಗಳು)

9. (5 ಅಂಕಗಳು)

a) ಮಾನವ ಸ್ತ್ರೀ ಸಂತಾನೋತ್ಪತ್ತಿ ವ್ಯವಸ್ಥೆಯಲ್ಲಿ ಈ ಮುಂದಿನ ಕ್ರಿಯಗಳನ್ನು ನಿರ್ವಹಿಸುವ ಭಾಗವನ್ನು ಹೆಸರಿಸಿ.

i) ಅಂಡಾಣುಗಳನ್ನು ಉತ್ಪಾದಿಸುತ್ತದೆ.

ii) ಅಂಡಾಣುಗಳು ಮತ್ತು ವೀರ್ಯಾಣುಗಳ ಸಮ್ಮಿಲನವು ನಡೆಯುತ್ತದೆ.

iii) ಯುಗ್ಮಜವನ್ನು ಅಳವಡಿಸಲಾಗುತ್ತದೆ.

b) ಯುಗ್ಮಜವು ಗರ್ಭಾಶಯದಲ್ಲಿ ಅಳವಡಿಕೆಯಾದ ನಂತರ ಉಂಟಾಗುವ ಬದಲಾವಣೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಸುಗಮಕಾರರ ಹಿಮ್ಮಾಹಿತಿ :

ಸ್ವ ಅವಲೋಕನ ಮತ್ತು ಸುಧಾರಣೆ:

@KTBS
NOT TO BE REPUBLISHED

**ಹೆಚ್ಚಿನ ಪ್ರಶ್ನೆಗಳು :**

1. ಲೈಂಗಿಕ ಮತ್ತು ಅಲೈಂಗಿಕ ಸಂತಾನೋತ್ಪತ್ತಿಯ ವ್ಯತ್ಯಾಸ ತಿಳಿಸಿ. (2 ಅಂಕಗಳು)
2. ಸ್ತ್ರೀ ಸಂತಾನೋತ್ಪತ್ತಿಯ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ. (3 ಅಂಕಗಳು).
3. ಕಾಯಜ ರೀತಿಯ ಸಂತಾನೋತ್ಪತ್ತಿ ಎಂದರೇನು? ಉದಾಹರಣೆ ಕೊಡಿ. (2 ಅಂಕಗಳು)